# ಕೌಶಲ್ಯ ಕರ್ನಾಟಕ
# KOUSHALYA KARNATAKA

ಸಂಪುಟ–3 • ಸಂಚಿಕೆ–1 • ಪುಟ–52 • ಆಗಸ್ಟ್ 2023 Volume-3 • Issue - 1 • Pages-52 • August 2023




**ಚಂದ್ರಯಾನ-2ಕ್ಕೆ ಜಿಟಿಟಿಸಿಯ ಕೊಡುಗೆ**




ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಬರುವ ರಾಷ್ಟ್ರೀಯ ಜೀವನೋಪಾಯ ಅಭಿಯಾನವು ಮಹಿಳಾ ಸ್ವ-ಸಹಾಯ ಗುಂಪುಗಳು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸಲು "ಒಂದು ನಿಲ್ದಾಣ-ಒಂದು ಉತ್ಪನ್ನ ಮಳಿಗೆ"ಯನ್ನು ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮತ್ತು ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣಗಳಲ್ಲಿ ಸ್ಥಾಪಿಸಿದ್ದು ಈ ಮಳಿಗೆಯನ್ನು ಡಾ|| ಶರಣಪ್ರಕಾಶ್ ಆರ್.ಪಾಟೀಲ್, ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು, ಉದ್ಘಾಟಿಸಿದ ಸಂದರ್ಭದಲ್ಲಿ ಅಭಿಯಾನ ನಿರ್ದೇಶಕರು, ಹಾಗೂ ಮತ್ತಿತರೆ ಅಧಿಕಾರಿಗಳು ಹಾಜರಿರುವುದು.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ
Skill Development, Entrepreneurship and Livelihood Department, Govt. of Karnataka



ಸಿಎನ್‌ಸಿ ಮಿಲ್ಲಿಂಗ್ ಮತ್ತು ಟರ್ನಿಂಗ್ ತರಬೇತಿಗಾಗಿ ಮೈಸೂರಿನ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ (ಕೆಜಿಟಿಟಿಐ)ನಲ್ಲಿ ಲಭ್ಯವಿರುವ ಸಿಎನ್‌ಸಿ ಯಂತ್ರೋಪಕರಣಗಳು

Skill India

KAUSHALYA KARNATAKA

Department of Skill Development, Entrepreneurship and Livelihood (SDEL)
Government of Karnataka

KARNATAKA SKILL DEVELOPMENT CORPORATION (KSDC)

*Free Training in Banking, Financial Services and Insurance (BFSI)*

| Sl No | Name of Job Role (QP Code) | Minimum Qualification | Total Duration (in hours) | Key Modules |
|---|---|---|---|---|
| 1 | Accounts Executive (BSC/Q8101) | 10+2 with Commerce OR Graduation with 2 years of experience in the Financial Sector OR B.Com/BBA/Graduation with Economics | Theory: 215<br>Practical: 135<br>Total: 350 | 1. Taxation, GST, Returns Filing<br>2. Payroll function<br>3. Basics of Accounting<br>4. Financial Statements<br>5. Communication, Ethics, Teamwork |
| 2 | Insurance Agent (BSC/Q3801) | 12th class in any stream or 3 yrs Govt. recognized diploma after class 10th | Theory: 112<br>Practical: 192<br>On-the-job: 100<br>Total: 404 | 1. Basics of BFSI<br>2. Client advisory<br>3. Pre-issuance and post-issuance services<br>4. Digital tools, communication, data integrity etc. |
| 3 | Mutual Funds Distributor (BSC/Q3802) | 12th class in any stream or 3 yrs Govt. Recognized diploma after class 10th | Theory: 104<br>Practical: 200<br>On-the-job: 100<br>Total: 404 | 1. Basics of BFSI<br>2. Client advisory and market research<br>3. Sales and after-sales<br>4. Digital tools, communication, data integrity etc. |
| 4 | Credit Processing Officer (BSC/Q2304) | Graduate in any stream with min. 6 months of experience in BFSI OR has completed certificate on any BFSI Qualification of level 3 | Theory: 160<br>Practical: 244<br>Total: 404 | 1. Basics of BFSI<br>2. Verification of loan application<br>3. Preparation of Credit Appraisal Memorandum<br>4. Digital tools, communication, data integrity etc.<br>5. Optional: Corporate loan / lease finance application processing |
| 5 | Microfinance Executive (BSC/Q2401) | 10th Class or 2 yrs ITI after 8th class | Theory: 116<br>Practical: 188<br>On-the-job: 100<br>Total: 404 | 1. Basics of BFSI & microfinance<br>2. Client advisory, sales, verification, loan disbursement<br>3. Records maintenance and administration<br>4. After-sales and follow-up<br>5. Digital tools, communication, data integrity etc. |
| 6 | Debt Recovery Agent (BSC/Q2303) | 12th class in any stream or 3 yrs Govt. recognized diploma after class 10th | Theory: 112<br>Practical: 192<br>On-the-job: 100<br>Total: 404 | 1. Basics of BFSI<br>2. Pre-recovery activities<br>3. Follow-up for receivables<br>4. Digital tools, communication, data integrity etc. |
| 7 | Business Correspondent / Facilitator (BSC/Q8401) | 12th class in any stream or 3 yrs Govt. recognized diploma after class 10th | Theory: 112<br>Practical: 192<br>On-the-job: 100<br>Total: 404 | 1. Basics of BFSI<br>2. Source customers, assist in application, transaction and banking services<br>3. Administrative activities<br>4. Digital tools, communication, data integrity etc. |

Helpline Number: 155 267 www.kaushalkar.com

# ಕೌಶಲ್ಯ ಕರ್ನಾಟಕ
# KOUSHALYA KARNATAKA

ಸಂಪುಟ–3 • ಸಂಚಿಕೆ–1 • ಆಗಸ್ಟ್ 2023
Vol-3 • Issue-1 • August 2023

**ಪ್ರಕಾಶಕರು • PUBLISHER**

**ಉಮಾ ಮಹಾದೇವನ್**
**ಅಪರ ಮುಖ್ಯ ಕಾರ್ಯದರ್ಶಿಗಳು,**
**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ**
**ಮತ್ತು ಜೀವನೋಪಾಯ ಇಲಾಖೆ**
ಕೊಠಡಿ ಸಂಖ್ಯೆ: 347, 2ನೇ ಹಂತ,
3ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಡಾ.ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು–560001

**Uma Mahadevan**
**Additional Chief Secretary**
**Skill Development,**
**Entrepreneurship & Livelihood**
**Department**
Room No.347, 2nd Gate, 3rd Floor,
M.S.Building, Dr.B.R.Ambedkar Veedhi,
Bengaluru-560001.

**ಸಂಪಾದಕರು • EDITOR**

**ರಂಗನಾಥ**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ**
**ಮತ್ತು ಜೀವನೋಪಾಯ ಇಲಾಖೆ**

**Ranganatha**
**Under Secretary to Govt.**
**Skill Development,**
**Entrepreneurship & Livelihood**
**Department**

**ಮುದ್ರಕರು • PRINTER**

**ಲಕ್ಷ್ಮೀನಾರಾಯಣ. ಎನ್**
**ನಿರ್ದೇಶಕರು, ಮುದ್ರಣ,**
**ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ**

1. **ಸರ್ಕಾರಿ ಕೇಂದ್ರ ಮುದ್ರಣಾಲಯ,**
8ನೇ ಮೈಲಿ, ಆರ್.ವಿ.ಕಾಲೇಜ್ ಪೋಸ್ಟ್,
ಮೈಸೂರು ರಸ್ತೆ, ಬೆಂಗಳೂರು– 560059.

2. **ಸರ್ಕಾರಿ ವಿಭಾಗೀಯ ಮುದ್ರಣಾಲಯ,**
ಸರಸ್ವತಿಪುರಂ, ಮೈಸೂರು– 570009.

**Lakshminarayana. N**
**Director, Department of Printing,**
**Stationery and Publications**

1. **Government Central Press,**
8th Mile, RV College Post, Mysore
Road, Bengaluru- 560059.

2. **Government Divisional Press,**
Saraswathipuram, Mysore- 570009.

**ಮಾಲೀಕರು • OWNER**

**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು**
**ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ**

**Skill Development, Entrepreneurship**
**& Livelihood Department**
**Government of Karnataka**

## ಪರಿವಿಡಿ • CONTENT

1. ರೈಲ್ವೆ ನಿಲ್ದಾಣಗಳಲ್ಲಿ, “ಒಂದು ನಿಲ್ದಾಣ ಒಂದು ಉತ್ಪನ್ನ ಮಳಿಗೆ” 5
2. ಕುಗ್ಗದಿರಲಿ ಯುವಶಕ್ತಿ 8
3. ಕರ್ನಾಟಕ ಸ್ಕಿಲ್ ಕನೆಕ್ಟ್ ಪೋರ್ಟಲ್ 10
4. ಶ್ನೈಡರ್ ಇಲೆಕ್ಟ್ರಿಕ್ ಕಂ ಸಹಯೋಗದೊಂದಿಗೆ ಕೆಜಿಟಿಟಿಐನಿಂದ ಮೈಸೂರಿನಲ್ಲಿ ಯಾಂತ್ರೀಕರಣ (ಆಟೋಮೇಷನ್) ತರಬೇತಿಗೆ ಹೊಸ ಕೋರ್ಸ್ 11
5. ಮಹಿಳಾ ಸಾಧಕರು: ಉದ್ಯಮಶೀಲರ ವ್ಯಕ್ತಿ ಚಿತ್ರ ವಿವರಣೆಗಳು
ಅ. ಪ್ಯಾನ್ಸಿಸ್ಟೋರ್ ಮತ್ತು ಕ್ಲಾತ್ ಸೆಂಟರ್ 14
ಆ. ಖಾದ್ಯ ತೈಲ ಉತ್ಪಾದನಾ ಘಟಕ 16
6. ಕುಟುಂಬ ನಿರ್ವಹಣೆಗೆ ನಗರಗಳಿಗೆ ಉದ್ಯೋಗ ಬಯಸಿ ಬರುವವರಿಗೆ ಮತ್ತು ಕುಟುಂಬದ ನಿರ್ಲಕ್ಷ್ಯಕ್ಕೆ ಒಳಗಾದವರಿಗೆ ಆಸರೆಯಾದ ಯಾದಗಿರಿ ನಿರಾಶ್ರಿತ ಆಶ್ರಯ ಕೇಂದ್ರ 18
7. ಜಾಗೃತಿ, ಕೌಶಲ್ಯಾಭಿವೃದ್ಧಿ, ಯುವಸಬಲೀಕರಣ ಕಾರ್ಯಕ್ರಮಗಳ ಕುರಿತು ಕೆಎಸ್‌ಡಿಸಿ ತ್ರೈಮಾಸಿಕ ವರದಿ 23
8. ಚಂದ್ರಯಾನ –3 ಸಂಕ್ಷಿಪ್ತ ಇಣುಕು ನೋಟ ಲೇಖಕರು:ಶ್ರೀ ಯತೀಶ್‌ರಾವ್ ಸುರತ್ಕಲ್, ಜಿಟಿಟಿಸಿ 28

9. One Station One Product Initiative in Karnataka Railway Stations 33
10. Karnataka Skill Connect Portal 36
11. Personal Details of Entrepreneur 37
12. Sensitizing, Skilling and Empowering Youth of Karnataka 41
13. Chandrayaan-3 A Brief Note Author: Shri Yatish Rao Surathkal 46



## ಪ್ರಕಾಶಕರ ನುಡಿ

ಪ್ರಿಯ ಓದುಗರೇ,

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಬರುವ ರಾಷ್ಟ್ರೀಯ ಜೀವನೋಪಾಯ ಅಭಿಯಾನವು ಸಂಜೀವಿನಿ, ಡೇ–ನಲ್ಮ್ ಮತ್ತು ಕೇಂದ್ರ ರೈಲ್ವೆ ಸಚಿವಾಲಯ ಸಹಯೋಗದಲ್ಲಿ 'ಒಂದು ನಿಲ್ದಾಣ– ಒಂದು ಉತ್ಪನ್ನ ಮಳಿಗೆ' ರಾಜ್ಯದ 09 ರೈಲ್ವೆ ನಿಲ್ದಾಣಗಳಲ್ಲಿ ಆಕರ್ಷಣೀಯವಾಗಿ ತೆರೆಯಲಾಗಿದೆ. ಇದರ ಉದ್ದೇಶ ಮಹಿಳಾ ಸ್ವ–ಸಹಾಯ ಗುಂಪುಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ, ಆರ್ಥಿಕ ನೆರವು, ಮಾರುಕಟ್ಟೆ ಸೌಲಭ್ಯ ಇತ್ಯಾದಿಗಳನ್ನು ಒದಗಿಸಿ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿನ ಬಡತನದ ಪ್ರಮಾಣವನ್ನು ಕಡಿಮೆ ಮಾಡುವ ಮತ್ತು ಕರಕುಶಲ ಕರ್ಮಿಗಳ ಜೀವನೋಪಾಯಕ್ಕೆ ಸೂಕ್ತ ಅವಕಾಶ ಕಲ್ಪಿಸುವುದಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಸಂಗೊಳ್ಳಿರಾಯಣ್ಣ ಕೇಂದ್ರ ರೈಲ್ವೇ ನಿಲ್ದಾಣ ಹಾಗೂ ಕಂಟೋನ್ಮೆಂಟ್ ರೈಲ್ವೇ ನಿಲ್ದಾಣದಲ್ಲಿ ಡಾ. ಶರಣ ಪ್ರಕಾಶ ಆರ್. ಪಾಟೀಲ, ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ದಿನಾಂಕ:17.08.2023 ರಂದು ಮಳಿಗೆಗಳನ್ನು ಉದ್ಘಾಟಿಸುವ ಮೂಲಕ ಚಾಲನೆ ನೀಡಿದರು. ಈ ಮಳಿಗೆಗಳಲ್ಲಿ ಕೈಮಗ್ಗ ನೇಕಾರರು ತಯಾರಿಸಿದ ವಿವಿಧ ಸೀರೆಗಳು, ವಿಶೇಷವಾಗಿ ಇಳಕಲ್ ಸೀರೆ, ಆಕರ್ಷಕ ಗೊಂಬೆಗಳು, ಸಿರಿಧಾನ್ಯದಿಂದ ತಯಾರಿಸಿದ ಆಹಾರ ಪದಾರ್ಥಗಳು, ಬಟ್ಟೆಯ ಚೀಲಗಳು, ಬಟ್ಟೆ ಉತ್ಪನ್ನಗಳು, ಗೃಹಾಲಂಕಾರಿಕ ವಸ್ತುಗಳು, ಅಲಂಕಾರಿಕ ಒಡವೆ, ರೇಷ್ಮೆ ಉತ್ಪನ್ನಗಳು ಮತ್ತು ಚಿಕ್ಕ ಉತ್ಪನ್ನಗಳು ಇತ್ಯಾದಿ ದೊರೆಯುತ್ತವೆ.

ಗ್ರಾಮೀಣ ಹಾಗೂ ನಗರವಾಸಿ ಮಹಿಳೆಯರೂ ಸಹ ಸ್ವ–ಉದ್ಯೋಗ ಕೈಗೊಂಡು ನೆಮ್ಮದಿಯ ಬದುಕು ಕಟ್ಟಿಕೊಳ್ಳಬೇಕೆಂಬುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಉದ್ದೇಶ. ಈ ಮಾರಾಟ ಮಳಿಗೆಗಳಲ್ಲಿ ರಾಜ್ಯದ ಸ್ವ–ಸಹಾಯ ಗುಂಪುಗಳು ಪ್ರತಿ 15 ದಿನಕ್ಕೊಮ್ಮೆ ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಿ ಮಾರಾಟ ಮಾಡುವುದರಿಂದ ವ್ಯವಹಾರ ಜ್ಞಾನ ಬೆಳೆದು ನವೀಕೃತ ಉತ್ಪನ್ನಗಳನ್ನು ಮಾರಾಟ ಮಾಡುವ ಮೂಲಕ ಆರ್ಥಿಕವಾಗಿ ಸದೃಢರಾಗಬಹುದು.

**(ಉಮಾ ಮಹಾದೇವನ್, ಭಾ.ಆ.ಸೇ.)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

# ರೈಲ್ವೆ ನಿಲ್ದಾಣಗಳಲ್ಲಿ, 'ಒಂದು ನಿಲ್ದಾಣ ಒಂದು ಉತ್ಪನ್ನ ಮಳಿಗೆ'

## ಮಾನ್ಯ ಡಾ. ಶರಣ ಪ್ರಕಾಶ ಆರ್. ಪಾಟೀಲರಿಂದ ಉದ್ಘಾಟನೆ






ಒಂದು ನಿಲ್ದಾಣ - ಒಂದು ಉತ್ಪನ್ನ ಮಾರಾಟ ಮಳಿಗೆಗಳ ಸ್ಥಾಪನೆ ಕೇಂದ್ರ ರೈಲ್ವೇ ಸಚಿವಾಲಯ ಮತ್ತು ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಸಹಯೋಗದಲ್ಲಿ ಅನುಷ್ಠಾನಗೊಳ್ಳುತ್ತಿದೆ. ಈ ಯೋಜನೆಯ ಮುಖ್ಯ ಉದ್ದೇಶ ಸ್ಥಳೀಯ ಕರಕುಶಲ ಕರ್ಮಿಗಳು, ಕೈಮಗ್ಗ ನೇಕಾರರು ಮುಂತಾದವರ ಜೀವನೋಪಾಯ ಮತ್ತು ಕೌಶಲ್ಯಾಭಿವೃದ್ಧಿಗೆ ಸೂಕ್ತ ಅವಕಾಶವನ್ನು ಕಲ್ಪಿಸುವುದಾಗಿರುತ್ತದೆ.

ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಮುಖ್ಯ ಉದ್ದೇಶ - ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಆರ್ಥಿಕ ನೆರವು, ಕೌಶಲ್ಯಾಭಿವೃದ್ಧಿ ತರಬೇತಿ, ಮಾರುಕಟ್ಟೆ ಸೌಲಭ್ಯ ಇತ್ಯಾದಿಗಳನ್ನು ಒದಗಿಸಿ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿನ ಬಡತನದ ಪ್ರಮಾಣವನ್ನು ಕಡಿಮೆ ಮಾಡುವುದಾಗಿರುತ್ತದೆ.

ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಬಂದರೆ ಅವರ ಕುಟುಂಬಕ್ಕೆ ಆಶ್ರಯ ಸಿಕ್ಕಂತಾಗುತ್ತದೆ. ಪುರುಷರಷ್ಟೇ ದುಡಿದರೆ ಸಾಲದು, ಗ್ರಾಮೀಣ ಹಾಗೂ ನಗರವಾಸಿ ಮಹಿಳೆಯರು ಸಹ ಸ್ವ-ಉದ್ಯೋಗ ಕೈಗೊಂಡು ನೆಮ್ಮದಿಯ ಬದುಕು ಕಟ್ಟಿಕೊಳ್ಳಬೇಕೆಂಬುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಉದ್ದೇಶವಾಗಿದೆ. ಅದರಲ್ಲೂ ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಪಾತ್ರ ಮಹತ್ವದ್ದಾಗಿರುವುದರಿಂದ ಕರಕುಶಲ, ಕೈಮಗ್ಗ ನೇಕಾರರ ಬಟ್ಟೆ, ಸಿರಿಧಾನ್ಯಗಳ ಮಾರಾಟ, ಬ್ಯಾಗು - ಮುಖ್ಯವಾಗಿ ಬಟ್ಟೆಯ ಚೀಲಗಳು, ಬಟ್ಟೆ ಉತ್ಪನ್ನಗಳು, ಗೃಹಾಲಂಕಾರಿಕ ವಸ್ತುಗಳು, ಅಲಂಕಾರಿಕ ಒಡವೆ, ರೇಷ್ಮೆ ಉತ್ಪನ್ನಗಳು, ಚೆಕ್ಕಿ ಉತ್ಪನ್ನಗಳು ಮೊದಲಾದ ವಸ್ತುಗಳ ತಯಾರಿಸುವ

ಮಹಿಳೆಯರಿಗೆ ಮಾರುಕಟ್ಟೆ ಕಲ್ಪಿಸಲು ರಾಜ್ಯದ ಪ್ರಮುಖ ರೈಲ್ವೇ ನಿಲ್ದಾಣಗಳಲ್ಲಿ ಇಂಥ ಮಳಿಗೆಗಳನ್ನು ಆಕರ್ಷಣೀಯವಾಗಿ ತೆರೆಯಲಾಗಿದೆ.

ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಸಂಗೊಳ್ಳಿರಾಯಣ್ಣ ಕೇಂದ್ರ ರೈಲ್ವೇ ನಿಲ್ದಾಣದ ಪ್ರವೇಶ ದ್ವಾರದಲ್ಲಿ ಕೈಮಗ್ಗ ನೇಕಾರರು ತಯಾರಿಸಿದ ವಿವಿಧ ಸೀರೆಗಳು, ವಿಶೇಷವಾಗಿ ಇಳಕಲ್ ಸೀರೆ ಆಕರ್ಷಕ ಗೊಂಬೆಗಳ ಮಾರಾಟ ಮಳಿಗೆ ಹಾಗೂ ಕಂಟೋನ್ಮೆಂಟ್ ರೈಲ್ವೇ ನಿಲ್ದಾಣದಲ್ಲಿ ಸಿರಿಧಾನ್ಯದಿಂದ ತಯಾರಿಸಿದ ಆಹಾರ ಪದಾರ್ಥಗಳ ಮಾರಾಟ ಮಳಿಗೆಗಳಿಗೆ ಚಾಲನೆ ನೀಡಲಾಗಿದೆ.

**ಈ ಯೋಜನೆಯ ಉದ್ದೇಶಗಳು:**

ಎ) **ಸ್ವ-ಸಹಾಯ ಗುಂಪುಗಳ ಸಬಲೀಕರಣ:** ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಲು ಮತ್ತು ಮಾರಾಟ ಮಾಡಲು ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವುದರಿಂದ ಅವರ ಆರ್ಥಿಕ ಚಟುವಟಿಕೆಗಳನ್ನು ಉನ್ನತಗೊಳಿಸುವುದು ಮತ್ತು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುವುದು.

ಬಿ) **ಸ್ಥಾನಿಕ ಕಲೆ ಮತ್ತು ಶಿಲ್ಪಕಲೆಯ ಪ್ರದರ್ಶನ:** ಕರ್ನಾಟಕದ ಸಾಂಸ್ಕೃತಿಕ ಐತಿಹಾಸಿಕತೆಯನ್ನು ಪ್ರತಿನಿಧಿಸುವ ಹಸ್ತಶಿಲ್ಪಗಳು, ಕಲಾಕೃತಿಗಳು ಮತ್ತು ಸ್ಥಳೀಯವಾಗಿ ತಯಾರಿಸಲಾದ ಉತ್ಪನ್ನಗಳ ವಿವಿಧ ಕಲೆಗಳ ಪ್ರಾಮುಖ್ಯತೆ.

ಸಿ) **ಸುಸ್ಥಿರ ಜೀವನೋಪಾಯ:** ಮಹಿಳಾ ಸ್ವ-ಸಹಾಯ ಗುಂಪುಗಳು ತಯಾರಿಸಿದ ಉತ್ಪನ್ನಗಳ ಪ್ರಚಾರದ ಮೂಲಕ ಪ್ರಾದೇಶಿಕವಾಗಿ ಕುಶಲಕರ್ಮಿಗಳು ಮತ್ತು ಉದ್ದಿಮೆದಾರರ ಸುಸ್ಥಿರ ಜೀವನೋಪಾಯಕ್ಕೆ ಉತ್ತೇಜನ ನೀಡುವುದು.

ಡಿ) **ಕೌಶಲ್ಯಾಭಿವೃದ್ಧಿ:** ಮಹಿಳಾ ಸ್ವ-ಸಹಾಯ ಗುಂಪುಗಳು ಉತ್ಪಾದಿಸುವ ವಸ್ತುಗಳನ್ನು ಮಾರಾಟ ಮೇಳಗಳಲ್ಲಿ ಭಾಗವಹಿಸಲು ಉತ್ತೇಜನ ಮತ್ತು ನಿರಂತರ ಕೌಶಲ್ಯ ಸುಧಾರಣೆ, ಉತ್ಪನ್ನ ನವೀಕರಣ ಮತ್ತು ವ್ಯವಹಾರ ಜ್ಞಾನ ಬೆಳೆಯುವುದು.

- **ಪ್ರಸ್ತುತ ರಾಷ್ಟ್ರೀಯ ಜೀವನೋಪಾಯ ಅಭಿಯಾನ ದಿಂದ ರಾಜ್ಯದ 09 ರೈಲ್ವೇ ಕೇಂದ್ರಗಳಲ್ಲಿ ಸ್ವ-ಸಹಾಯ ಗುಂಪುಗಳು ಈ ಕೆಳಕಂಡ ಉತ್ಪನ್ನಗಳೊಂದಿಗೆ ಮಳಿಗೆಗಳನ್ನು ಸ್ಥಾಪಿಸಲಾಗಿರುತ್ತದೆ.**

| ಕ್ರ. ಸಂ. | ರೈಲ್ವೇ ನಿಲ್ದಾಣದ ಹೆಸರು | ಉತ್ಪನ್ನದ ಹೆಸರು |
|---|---|---|
| 1. | ಕಂಟೋನ್‌ಮೆಂಟ್ | ಸಿರಿಧಾನ್ಯ ಉತ್ಪನ್ನಗಳು |
| 2. | ಮೆಜೆಸ್ಟಿಕ್ (ಸಂಗೊಳ್ಳಿ ರಾಯಣ್ಣ) | ವಿವಿಧ ಸೀರೆಗಳು, ಆಟಿಕೆ ಉತ್ಪನ್ನಗಳು |
| 3. | ಯಶವಂತಪುರ | ಸಾರಿ ಮತ್ತು ಬ್ಯಾಗ್ ಉತ್ಪನ್ನಗಳು |
| 4. | ಕೆಂಗೇರಿ | ಕಾಟನ್ ಬ್ಯಾಗ್ ಮತ್ತು ಬಟ್ಟೆ ಉತ್ಪನ್ನಗಳು |
| 5. | ರಾಯಚೂರು | ವಿವಿಧ ಮುತ್ತಿನ ಹಾರಗಳು. |
| 6. | ಬೆಳಗಾವಿ | ಗೃಹಾಲಂಕಾರ ವಸ್ತುಗಳು. |
| 7. | ಮಂಡ್ಯ | ಅಲಂಕಾರಿಕ ಒಡವೆ ಮತ್ತು ಬಳೆಗಳು. |
| 8. | ತುಮಕೂರು | ಅಲಂಕಾರಿಕ ರೇಷ್ಮೆ ಉತ್ಪನ್ನಗಳು |
| 9. | ಯಲಹಂಕ | ಸಿರಿಧಾನ್ಯ ಮತ್ತು ಚಿಕ್ಕಿ ಉತ್ಪನ್ನಗಳು |

ಪ್ರತಿ ಸ್ವ-ಸಹಾಯ ಸಂಘಕ್ಕೆ 15 ದಿನಗಳವರೆಗೆ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಿದ್ದು ತದನಂತರ ಪರಿವರ್ತನೆ (Rotation) ಆಧಾರದ ಮೇಲೆ ವಿವಿಧ ಸ್ವ-ಸಹಾಯ ಗುಂಪುಗಳು ಭಾಗವಹಿಸುತ್ತವೆ. ಮಾನ್ಯ ಶ್ರೀ ಶರಣಪ್ರಕಾಶ ಆರ್. ಪಾಟೀಲ, ಸಚಿವರು, ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ ಅವರು ಒಂದು ನಿಲ್ದಾಣ ಒಂದು ಉತ್ಪನ್ನ ಯೋಜನೆಯಡಿ ಕಂಟೋನ್ಮೆಂಟ್ ಮತ್ತು

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೇ ನಿಲ್ದಾಣ, ಬೆಂಗಳೂರು ಇಲ್ಲಿ ಸ್ವ-ಸಹಾಯ ಗುಂಪುಗಳು ತಯಾರಿಸಿದ ಉತ್ಪನ್ನಗಳ ಮಳಿಗೆ ಉದ್ಘಾಟನೆ ನೆರವೇರಿಸಿದರು. ಅಭಿಯಾನ ನಿರ್ದೇಶಕರಾದ ಡಾ. ರಾಗಪ್ರಿಯಾ ಆರ್., ನಲ್ಮ್ ಯೋಜನಾಧಿಕಾರಿ ರಾಗವಿ ವಿನೋದ ನಾಯಕ್ ಮತ್ತಿತರರು ಹಾಜರಿದ್ದರು.



## ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಉತ್ತೇಜನ 'ಒಂದು ನಿಲ್ದಾಣ ಒಂದು ಉತ್ಪನ್ನ ಮಳಿಗೆ': ಮಾನ್ಯ ಡಾ. ಶರಣ ಪ್ರಕಾಶ ಆರ್. ಪಾಟೀಲ

"ಮಹಿಳಾ ಸ್ವ-ಸಹಾಯ ಗುಂಪುಗಳ ಆರ್ಥಿಕ ಸಬಲೀಕರಣಕ್ಕಾಗಿ 'ಒಂದು ನಿಲ್ದಾಣ ಒಂದು ಉತ್ಪನ್ನ' ಯೋಜನೆ ಜಾರಿಗೆ ಬಂದಿದೆ. ರಾಷ್ಟ್ರೀಯ ಜೀವನೋಪಾಯ ಅಭಿಯಾನ ಸಂಜೀವಿನಿ ಡೇ-ನಲ್ಮ್ ಸಹಯೋಗದಲ್ಲಿ ರೈಲ್ವೇ ಇಲಾಖೆ ಜೊತೆ ಒಪ್ಪಂದ ಮಾಡಿಕೊಂಡು ಈ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಹದಿನೈದು ದಿನಗಳಿಗೊಮ್ಮೆ ಬೇರೆಬೇರೆ ಮಹಿಳಾ ಸ್ವ-ಸಹಾಯ ಗುಂಪುಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶನ ಹಾಗೂ ಮಾರಾಟ ಮಾಡಲಿವೆ. ಈ ಮೂಲಕ ಆರ್ಥಿಕ ಸಬಲೀಕರಣಕ್ಕೆ ಉತ್ತೇಜನ ನೀಡಲಾಗುತ್ತಿದೆ. ಬೇರೆ ಬೇರೆ ನಿಲ್ದಾಣಗಳಲ್ಲಿ ವಿಭಿನ್ನ ಉತ್ಪನ್ನಗಳ ಮಾರಾಟಕ್ಕೆ ಅವಕಾಶ ಮಾಡಿಕೊಡಲಾಗಿದೆ. ಎಂದು ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವ ಡಾ. ಶರಣ ಪ್ರಕಾಶ ಆರ್. ಪಾಟೀಲ ಅವರು ಹೇಳಿದರು.

# ಕುಗ್ಗದಿರಲಿ ಯುವಶಕ್ತಿ

■ ಲೇಖಕರು:
**ಶ್ರೀ ಚಂದ್ರಕಾಂತ ಹಿರೇಮಠ**
**ರಾಜ್ಯ ತರಬೇತಿ ಸಂಯೋಜಕರು**
**ನೀರು, ನೈರ್ಮಲ್ಯ ಹಾಗೂ ಶುಚಿತ್ವ (ವಾಷ್)**
(WASH Programme Supported by UNICEF)
**ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ಬೆಂಗಳೂರು.**

ಒಂದು ದೇಶದ ಬಹುದೊಡ್ಡ ಶಕ್ತಿ ಎಂದರೆ ಅಲ್ಲಿನ ಯುವಶಕ್ತಿ. ಯುವ ಜನತೆ ದೇಶದ ಹಾಗೂ ಭವಿಷ್ಯದ ಪರಿವರ್ತನಕಾರರು, ನಿರ್ಮಾತೃಗಳು ಹಾಗೂ ಜಗತ್ತನ್ನೇ ಬದಲಿಸುವ ನಾಯಕರು. ಒಂದು ದೇಶದ ನಿಜವಾದ ಸಂಪತ್ತು ಎಂದರೆ ಆದೇಶದ ಯುವ ಸಮೂಹವೇ ಆಗಿದೆ. ಆ ದೇಶದ ಅಭಿವೃದ್ಧಿ ಅಲ್ಲಿನ ಯುವ ಸಮುದಾಯದ ಮೇಲೆ ನಿಂತಿದೆ.

ಯುವ ಜನಾಂಗ ತುಂಬಾ ಶಕ್ತಿಯುತ ಮತ್ತು ಸಮರ್ಥ ಸಾಮರ್ಥ್ಯದಿಂದ ಕೂಡಿದ್ದಾಗಿದೆ, ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡರೆ ಯಶಸ್ಸು ಖಂಡಿತ ಸಾಧ್ಯ. ಸ್ವಉದ್ಯೋಗದ ಪರಿಕಲ್ಪನೆಯನ್ನು ಕಟ್ಟಿ ಕೊಡುವ ಮತ್ತು ಹುಟ್ಟು ಹಾಕುವ ಕೆಲಸಕ್ಕೆ ಯುವ ಜನಾಂಗ ಮುಂದಾಗಬೇಕಿದೆ. ಇದರಿಂದ ಇತರ ಯುವ ಸಮುದಾಯವೂ ಕೂಡ ಸ್ವಾವಲಂಭಿಯಾಗುವ ಮನೋಭಾವನೆಯಿಂದ ಬೆಳೆಯಲು ಮತ್ತು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಯುವಕ ಯುವತಿಯರು ಹೊಸ ಹೆಜ್ಜೆ ಇರಿಸುವತ್ತ ಉದ್ಯಮಿಯಾಗುವ ಕನಸನ್ನು ನನಸಾಗಿಸಲು ಪ್ರಯತ್ನ ಮಾಡಬೇಕಿದೆ. ನಮ್ಮ ಇಂದಿನ ಯುವ ಮಿತ್ರರು ಕೌಶಲ್ಯ ಆಧಾರಿತ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹೊಸ ಇತಿಹಾಸವನ್ನು ಸೃಷ್ಟಿಸುವ ಸಾಹಸಕ್ಕೆ ಕೈ ಹಾಕುವ ಮಟ್ಟಕ್ಕೆ ತಲುಪಬೇಕಿದೆ ಕಾರಣ ಇಷ್ಟೇ ಕೌಶಲ್ಯ ಆಧಾರಿತವಾದ ತರಬೇತಿ ಮತ್ತು ಶಿಕ್ಷಣ ಅವರನ್ನು ಯಾವತ್ತೂ ಮುಳುಗಲು ಬಿಡುವುದಿಲ್ಲ ಎಂಬ ಅರಿವು ಅವರಿಗೆ ಮೂಡಿದೆ.

ಇತ್ತೀಚಿನ ದಿನಗಳಲ್ಲಿ 'ಉದ್ಯಮಿಯೇ ಸ್ಟಾರ್' ಎಂಬ ಮನೋಭಾವನೆಯೂ ಕೂಡಾ ತಲೆದೂರಿದೆ. ಉದ್ಯೋಗವನ್ನು ಪಡೆಯಲು ಶ್ರಮಿಸುವ ಮತ್ತು





ಅಲೆಯುವ ದಿನಗಳು ಮಾಯವಾಗಿ ತಾವೇ ಉದ್ಯಮವನ್ನು ಆರಂಭಿಸುವ ಹಂತಕ್ಕೆ ಬಂದಿದ್ದಾರೆ, ಈ ರೂಪಾಂತರದ ಅನಿವಾರ್ಯ ಇಂದಿನ ದಿನ ಮಾನಗಳಲ್ಲಿ ಅನಿವಾರ್ಯವಾಗಿದೆ.

ಬೃಹತ್ ಭಾರತದ ಜನಸಂಖ್ಯೆಯಲ್ಲಿ ಪ್ರತಿಭೆಗೆ ಕೊರತೆ ಇಲ್ಲ. ಆದರೆ ಅವರನ್ನು ಕೌಶಲ್ಯದಿಂದ ಸಜ್ಜುಗೊಳಿಸುವುದು ಬಹಳ ಮುಖ್ಯ. ಇದರಲ್ಲಿ ವಿಶ್ವ ಬ್ಯಾಂಕು, ಯುನಿಸೆಫ್, ಕೂಡ ಭಾರತವನ್ನು ಬಿಂಬಿಸುತ್ತದೆ ಮತ್ತು ಶಿಕ್ಷಣ ನೀತಿಯಲ್ಲಿ ಬದಲಾವಣೆಯನ್ನು ತಂದು, ಪಠ್ಯಕ್ರಮದ ಹೊರೆ ಕಡಿಮೆ ಮಾಡಿ ಕೌಶಲ್ಯಗಳನ್ನು ಸುಧಾರಿಸುವ ಗುರಿ ಹೊಂದಿದೆ. ಜೊತೆಗೆ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಲ್ಲಿ 10 ದಿನದಿಂದ 45 ದಿನಗಳವರೆಗೆ ಹಲವಾರು ಕೌಶಲ್ಯ ಆಧಾರಿತವಾದ ಹೈನುಗಾರಿಕೆ ಮತ್ತು ಎರೆಹುಳು ಗೊಬ್ಬರ ತಯಾರಿಕೆ, ಕುರಿ ಮತ್ತು ಮೇಕೆ ಸಾಕಾಣಿಕೆ, ಜೇನು ಸಾಕಾಣಿಕೆ, ಮೊಲ ಸಾಕಾಣಿಕೆ, ವಸ್ತ್ರ ಚಿತ್ರಕಲಾ ಉದ್ಯಮಿ, ಅಣಬೆ ತಯಾರಿಕೆ, ಟೈಲರಿಂಗ್, ಬ್ಯೂಟಿ ಪಾರ್ಲರ್, ಮೋಟಾರ್ ರಿವೈಂಡಿಂಗ್ ಮತ್ತು ಪಂಪ್ ಸೇಟ್ ರಿಪೇರಿ, ಕಂಪ್ಯೂಟರ್ ತರಬೇತಿ, ಇವೆಲ್ಲವುಗಳು ನಿರುದ್ಯೋಗಿ ಮತ್ತು ಸ್ವಉದ್ಯೋಗ ಮಾಡಬಯಸುವ ಯುವಕ ಯುವತಿಯರ ಜೀವನಕ್ಕೆ ಭರವಸೆಯ ಬೆಳಕಾಗುತ್ತವೆ ಎಂದರೆ ತಪ್ಪಾಗಲಾರದು.

ಯುವ ಜನಾಂಗಕ್ಕೆ ಪ್ರಸ್ತುತ ದಿನ ಅರಿವಿಗೆ ಬರಬೇಕಾದ ಒಂದೇ ಒಂದು ಮಂತ್ರವೆಂದರೆ “ಕೌಶಲ್ಯ, ಮರು ಕೌಶಲ್ಯ, ಮತ್ತು ಉನ್ನತ ಕೌಶಲ್ಯ” ಕೌಶಲ್ಯವು ಹೊಸ ಕೌಶಲ್ಯವನ್ನು ಪಡೆದುಕೊಳ್ಳುವಂತೆ ಮಾಡುತ್ತದೆ. ಹೊಸದು ಕಲಿಯುವುದನ್ನು ಮುಂದುವರಿಸುವುದು ಮರು ಕೌಶಲ್ಯವನ್ನು ಬಯಸಿದಂತೆ. ಅದಕ್ಕೆ ಕೌಶಲ್ಯದ ಮಹತ್ವವನ್ನು ಅರಿಯುವುದು ತುಂಬಾ ಪ್ರಮುಖವಾಗಿದೆ. ಜೊತೆಗೆ ಯುವಕ ಯುವತಿಯರು ಹೊಸ ಉದ್ಯೋಗಗಳನ್ನು ಕೈಗೊಳ್ಳಬೇಕು ಧೈರ್ಯವಾಗಿ ಸವಾಲುಗಳನ್ನು ಎದುರಿಸಬೇಕು ಮತ್ತು ಬದಲಾಗುತ್ತಿರುವ ಉದ್ಯೋಗಾವಕಾಶಗಳ ಪರಿಣಾಮದಿಂದಾಗಿ ಇತರರಿಗೆ ಕೆಲಸ ನೀಡುವಂತಾಗಬೇಕು ಅಂದಾಗ ಮಾತ್ರ ನಮ್ಮ ರಾಜ್ಯ, ದೇಶ ಅಭಿವೃದ್ಧಿ ಹೊಂದಲು ಸಾಧ್ಯ.

**ದೀನದಯಾಳ್ ಅಂತ್ಯೋದಯ ಯೋಜನೆ – ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)**

080-2945 0333

nrlmkarnataka@gmail.com

www.ksrlps.karnataka.gov.in

ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

### ಕುವೆಂಪು ನುಡಿಗಳು

ನಾಳೆ ಎಂದರಾಗದು
ಮುಂದೆ ಎಂದರಾಗದು
ಇಂದೇ ನೀನು ನಿರ್ಣಯಿಸಬೇಕು

### ಬೇಂದ್ರೆಯವರ ನುಡಿಮುತ್ತು

ಎಂತಹ ಕಟು ಅನುಭವ ಪ್ರಸಂಗ
ಬಂದರೂ ಎದೆಗುಂದಬಾರದು
ಇದೇ ಜೀವನದಲ್ಲಿ
ಸುಖಿಯಾಗಿರೋ ರಹಸ್ಯ

# ಕರ್ನಾಟಕ ಸ್ಕಿಲ್ ಕನೆಕ್ಟ್ ಪೋರ್ಟಲ್

ಕರ್ನಾಟಕ ರಾಜ್ಯದ ಎಲ್ಲಾ ಯುವ ಜನತೆಗಾಗಿ ಉದ್ಯೋಗಾವಕಾಶವನ್ನು ಒದಗಿಸುವ ದೃಷ್ಟಿಯಿಂದ ಕರ್ನಾಟಕ ಸ್ಕಿಲ್ ಕನೆಕ್ಟ್ ಪೋರ್ಟಲ್‌ನ್ನು ಡಿಸೆಂಬರ್ 9, 2022 ರಂದು ಈಗಾಗಲೇ ಅಧಿಕೃತವಾಗಿ ಅನುಷ್ಠಾನಗೊಳಿಸಲಾಗಿದ್ದು, ಈ ಮೂಲಕ ಪದವೀಧರರಿಗಾಗಿ ಸಮಗ್ರ ವೃತ್ತಿ ಜೀವನದ ಆಯಾಮವನ್ನು ಈ ಪೋರ್ಟಲ್ ಒದಗಿಸಲಿದೆ.

ಸದರಿ ಪೋರ್ಟಲ್ ನಡಿ ಉದ್ಯೋಗಾವಕಾಶಗಳನ್ನು ಒದಗಿಸುವುದರ ಹೊರತಾಗಿ, ಪೋರ್ಟಲ್ ವಿದ್ಯಾರ್ಥಿಗಳಿಗೆ ವ್ಯಕ್ತಿ ಪರಿಚಯ (Resume), ವೀಡಿಯೋ ವ್ಯಕ್ತಿ ಪರಿಚಯ (Video Resume), ಸೈಕೋಮೆಟ್ರಿಕ್ ಮೌಲ್ಯಮಾಪನಗಳು ಮತ್ತು ತಾಂತ್ರಿಕ ಕೌಶಲ್ಯ ಮೌಲ್ಯಮಾಪನಗಳು ಹಾಗೂ ಇ-ಕೌಶಲ್ಯ (ಕಲಿಕೆ ನಿರ್ವಹಣಾ ವ್ಯವಸ್ಥೆ) ಅಡಿ Infosys Springboard, IBM Skills Build, Future Skill by R.V. Skills Institute., ಸಂಸ್ಥೆಗಳ ಸಹಭಾಗಿತ್ವದಡಿ 10,000 ಕ್ಕೂ ಅಧಿಕ ಡಿಜಿಟಲ್ ಸ್ಕಿಲಿಂಗ್ ಕೋರ್ಸ್‌ಗಳನ್ನು ಕಲಿಯಲು ಅವಕಾಶ ನೀಡಲಾಗಿದ್ದು, Artificial Intelligence Engine ಮೂಲಕ ಅಗತ್ಯವಾದ ಉದ್ಯೋಗಾವಕಾಶಗಳನ್ನು, Apprenticeship, Internshipಗಳನ್ನು ಗುರುತಿಸಿ, ಅಭ್ಯರ್ಥಿಗಳಿಗೆ ಅರ್ಜಿಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ 450ಕ್ಕೂ ಹೆಚ್ಚು ಉದ್ಯೋಗದಾತ ಸಂಸ್ಥೆಗಳನ್ನು ನೊಂದಾಯಿಸಿಕೊಳ್ಳಲಾಗಿದ್ದು, 20,000ಕ್ಕೂ ಅಧಿಕ ಹುದ್ದೆಗಳಿಗೆ ನೇಮಕಾತಿ ಕೈಗೊಳ್ಳಲು ಸ್ಕಿಲ್ ಕನೆಕ್ಟ್ ಪೋರ್ಟಲ್ ನಡಿ ಪ್ರಚುರ ಪಡಿಸಲಾಗಿದೆ.

ಈಗಾಗಲೇ ಸದರಿ ಪೋರ್ಟಲ್ ನಡಿ ಕೈಗಾರಿಕೆಗಳು 60,000ಕ್ಕೂ ಅಧಿಕ ಉದ್ಯೋಗಾಕಾಂಕ್ಷಿಗಳ ಅಂಕಿ ಅಂಶಗಳನ್ನು ನೋಂದಣಿಗೊಳಿಸಿದ್ದು, ಉದ್ಯೋಗಕಾಂಕ್ಷಿಗಳು ಸೈಕೋಮೆಟ್ರಿಕ್ ಮತ್ತು ತಾಂತ್ರಿಕ ಮೌಲ್ಯಮಾಪನಗಳ ಮೂಲಕ ವಿಡಿಯೋ ಸಂದರ್ಶನವನ್ನು ನಿಗದಿಪಡಿಸಿಕೊಂಡು ಉದ್ಯೋಗ ನಿಯುಕ್ತಿ ಪತ್ರವನ್ನು ಪಡೆಯಬಹುದಾಗಿದೆ.

ಮುಂದುವರೆದು, ಶೈಕ್ಷಣಿಕ ಸಂಸ್ಥೆಗಳು ಪೋರ್ಟಲ್ ನಡಿ ನೋಂದಣಿಗೊಂಡು ಕೈಗಾರಿಕೆಗಳ ವ್ಯವಸ್ಥಾಪಕರು ಮತ್ತು ನಡೆಸಲಾಗುವ ಕ್ಯಾಂಪಸ್ ವೇಳಾಪಟ್ಟಿಯನ್ನು ವೀಕ್ಷಿಸಬಹುದಾಗಿದೆ. ತರಬೇತುದಾರರು ತರಬೇತಿಯ ಅಭ್ಯರ್ಥಿಗಳನ್ನು ಪೋರ್ಟಲ್ ನಡಿ ವೆಬ್‌ನಾರ್ ಗಳ ಮೂಲಕ ಹಾಗೂ ಡೊಮಿನ್ ಜ್ಞಾನ ನೀಡುವುದರೊಂದಿಗೆ ಉದ್ಯೋಗಾಕಾಂಕ್ಷಿಗಳನ್ನು ಪೋರ್ಟಲ್ ನಡಿ ನೋಂದಣಿಗೊಳಿಸಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸ್ಕಿಲ್ ಕನೆಕ್ಟ್ ಪೋರ್ಟಲ್ ನಡಿ ಇದುವರೆವಿಗೂ 61327 ಅಭ್ಯರ್ಥಿಗಳನ್ನು, 465 ಕೈಗಾರಿಕೆಗಳನ್ನು, 52 ಶೈಕ್ಷಣಿಕ ಸಂಸ್ಥೆಗಳನ್ನು, 64 ತರಬೇತುದಾರರನ್ನು, 23587 ಸಕ್ರಿಯ ಉದ್ಯೋಗಾವಕಾಶಗಳ ಮಾಹಿತಿಯನ್ನು, 825 ಇನ್‌ಟರ್ನ್‌ಷಿಪ್ ಮತ್ತು 232 ಶಿಷ್ಯ ವೃತ್ತಿಗಳ ಮಾಹಿತಿಯನ್ನು ಪ್ರಚುರಪಡಿಸಲಾಗಿದ್ದು, 3000 ಕ್ಕೂ ಅಧಿಕ ಆಕಾಂಕ್ಷಿಗಳಿಗೆ ಉದ್ಯೋಗಾವಕಾಶವನ್ನು ಸ್ಕಿಲ್ ಕನೆಕ್ಟ್ ಪೋರ್ಟಲ್ ಮೂಲಕ ನೀಡಲಾಗಿದೆ.





ಸಿಎನ್‌ಸಿ ಮಿಲ್ಲಿಂಗ್ ಮತ್ತು ಟರ್ನಿಂಗ್ ತರಬೇತಿಗಾಗಿ ಮೈಸೂರಿನ ಕೆಜಿಟಿಟಿಐನಲ್ಲಿ ಲಭ್ಯವಿರುವ ಸಿಎನ್‌ಸಿ ಯಂತ್ರೋಪಕರಣಗಳು

# ಶ್ನೈಡರ್ ಇಲೆಕ್ಟ್ರಿಕ್ ಕಂ ಸಹಯೋಗದೊಂದಿಗೆ ಕೆಜಿಟಿಟಿಐನಿಂದ ಮೈಸೂರಿನಲ್ಲಿ ಯಾಂತ್ರೀಕರಣ (ಆಟೊಮೇಷನ್) ತರಬೇತಿಗೆ ಹೊಸ ಕೋರ್ಸ್

ದೇಶ ಅಭಿವೃದ್ಧಿ ಹೊಂದುತ್ತಿದ್ದಂತೆ, ರಕ್ಷಣೆ, ಬಾಹ್ಯಾಕಾಶ ಸಂಶೋಧನೆ ಮೊದಲಾದ ಕ್ಷೇತ್ರಗಳಲ್ಲಿ ಮುನ್ನಡೆಗೆ ಹೊಸ ಗುರಿಗಳನ್ನು ಹಾಕಿಕೊಳ್ಳಲಿದ್ದು ಪರೋಕ್ಷವಾಗಿ ಇದು ಅಲ್ಲಿನ ನಾಗರೀಕರಿಗೆ ಪರೋಕ್ಷವಾಗಿ ಅನುಕೂಲವಾಗುತ್ತದೆ. ವಿವಿಧ ಕ್ಷೇತ್ರಗಳಲ್ಲಿ ಕೌಶಲ್ಯಯುತ ವ್ಯಕ್ತಿಗಳಿದ್ದಾಗ ಮಾತ್ರ ಈ ಹೊಸ ಗುರಿಗಳ ಸಾಧನೆ ತಲುಪಬಹುದು. ಇತ್ತೀಚಿನ ಚಂದ್ರಯಾನ-3 ಇದಕ್ಕೊಂದು ಉತ್ತಮ ಉದಾಹರಣೆಯಾಗಿದ್ದು, ಸಾವಿರಾರು ಕೌಶಲ್ಯಯುತ ವಿಜ್ಞಾನಿಗಳು, ಉತ್ಪಾದನಾ ಪರಿಣಿತರು/ವಿಶೇಷಜ್ಞರು, ವೆಲ್ಡರ್‌ಗಳು, ನೆಟ್‌ವರ್ಕಿಂಗ್ (ಜಾಲ ನಿರ್ಮಾಣಗಾರರು), ಸಂವಹನ ಎಂಜಿನಿಯರ್‌ಗಳು ಹಾಗೂ ಅಂತೆಯೇ ಅನೇಕ ಸಮಾನರು ಇಲ್ಲದ ಹೊರತಾಗಿ ಇದು ಸಾಧ್ಯವಾಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ, ಸರ್ಕಾರವು ತನ್ನ ನಾಗರೀಕರರಿಗೆ ಹೊಚ್ಚ ಹೊಸ ಸವಾಲುಗಳನ್ನು ಎದುರಿಸಲು ಅನುವಾಗುವಂತೆ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಲು ಮತ್ತು ಕುಟುಂಬಗಳ ಜೀವನೋಪಾಯವನ್ನು ಸುಧಾರಿಸಲು ಹೆಚ್ಚು ಗಮನ ಕೇಂದ್ರೀಕರಿಸಿದೆ. ಈ ನಿಟ್ಟಿನಲ್ಲಿ, ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆಯು (ಕೆಜಿಟಿಟಿಐ) ಕರ್ನಾಟಕ ರಾಜ್ಯದ ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ತನ್ನ ಹೊಸ ಶಾಖೆಯನ್ನು ಆರಂಭಿಸಿದೆ.

ಮನೆಗಳ ಯಾಂತ್ರೀಕರಣ, ಸಿವಿಲ್ ಎಂಜಿನಿಯರ್‌ಗಳಿಗೆ ಕಟ್ಟಡ ನಿರ್ವಹಣಾ ವ್ಯವಸ್ಥೆ ಮೊದಲಾದ ಪ್ರಮುಖ ಆಸಕ್ತಿದಾಯಕ ಕ್ಷೇತ್ರಗಳಲ್ಲಿ ವ್ಯಕ್ತಿಗಳ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಹೊಸ ಕೋರ್ಸ್‌ಗಳನ್ನು

ಸೇರಿಸಲಾಗಿದೆ. ಮನೆಗಳಲ್ಲಿ ಮಾಡಲಾಗುವ ಸಾಂಸಾರಿಕ ಕೆಲಸಗಳನ್ನು ಯಾಂತ್ರೀಕರಣಗೊಳಿಸುವ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸಿವಿಲ್ ಎಂಜಿನಿಯರ್‌ಗಳಿಗೆ ಮಾಹಿತಿ/ತಿಳುವಳಿಕೆ ಮತ್ತು ಕೌಶಲ್ಯಗಳನ್ನು ಈ ತರಬೇತಿಗಳು ಒದಗಿಸಲಿವೆ. ಇದರ ಜೊತೆಗೆ ಸಿಸಿಟಿವಿ ಪ್ರಮಾಣಪತ್ರ ಕೋರ್ಸ್ (ಸರ್ಟಿಫಿಕೇಟ್ ಕೋರ್ಸ್)ನಂತಹ ತರಬೇತಿಗಳ್ಳೂ ಕೂಡ ಸೇರಿಸಲಾಗಿದೆ. ಸುರಕ್ಷತೆ/ಭದ್ರತೆಗೆ ಅತಿ ಹೆಚ್ಚು ಪ್ರಾಧಾನ್ಯತೆ ನೀಡುವ ಈ ಸಮಯದಲ್ಲಿ ಪ್ರತಿಯೊಂದು ನಿವಾಸಿಗಳನ್ನೂ ಮತ್ತು ಬೆಲೆಬಾಳುವ ವಸ್ತುಗಳನ್ನು ಕಳ್ಳತನ/ದರೋಡೆ ಹಾಗೂ ಇತರೇ ದುಷ್ಕೃತ್ಯಗಳಿಂದ ರಕ್ಷಿಸಲು ಸಿಸಿಟಿವಿ ವ್ಯವಸ್ಥೆಯನ್ನು ಪ್ರತಿಯೊಂದು ಮನೆಗಳೂ ಹೊಂದಿರಬೇಕು. ಉಪಕರಣವನ್ನು ಕರಾರುವಕ್ಕಾಗಿ ಅಳವಡಿಸುವುದು ಮತ್ತು ಯಾವುದೇ ಕುರುಡು ಸ್ಥಳಗಳು(ಬ್ಲೈಂಡ್ ಸ್ಪಾಟ್) ಒಳಗೊಳ್ಳದಂತೆ ಕ್ಯಾಮರಾಗಳ ಕೋನಗಳನ್ನು ನಿಗದಿಗೊಳಿಸುವುದು ಅಗತ್ಯವಾಗಿದೆ. ಯಾವುದೇ ಕ್ಷೇತ್ರಗಳಂತೆ ಈ ಕೆಲಸದಲ್ಲೂ ಕೂಡ ಅತೀವವಾದ ಕೌಶಲ್ಯದ ಅಗತ್ಯವಿದ್ದು ಇದನ್ನು ಕೆಜಿಟಿಟಿಐ ಮೈಸೂರಿನಲ್ಲಿ ಕಲಿಯಬಹುದಾಗಿದೆ.

ಕೈಗಾರಿಕಾ ಯಾಂತ್ರೀಕರಣ (ಇಂಡಸ್ಟ್ರಿಯಲ್ ಅಟೋಮೇಷನ್)ದಲ್ಲೂ ಕೆಜಿಟಿಟಿಐ ಮೈಸೂರು ತರಬೇತಿಯನ್ನು/ಕೋರ್ಸ್‌ಗಳನ್ನು ನೀಡುತ್ತಿದ್ದು ಯಾವುದೇ ಕೈಗಾರಿಕೆಯಲ್ಲೂ/ಕಾರ್ಖಾನೆಯಲ್ಲೂ ಯಾಂತ್ರೀಕರಣಕ್ಕೆ ಇದು ಅಗತ್ಯವಾಗಿದೆ. ಅಮೂಲ್ಯವಾದ ಮಾನವ ಸಮಯವನ್ನು . ಉಳಿಸಲು ಮತ್ತು ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸಲು ಹೆಕ್ಕುವ ಮತ್ತು ಇಡುವ, ಯಂತ್ರ ಮಾನವರನ್ನು (ರೊಬೊಟ್‌ಗಳು) ಬಳಸುವ ಕೆಲಸಗಳು. ಕೈಗಾರಿಕಾ ಯಾಂತ್ರೀಕರಣವು ಕಾರ್ಮಿಕರ ಕೆಲಸವನ್ನು ಕದಿಯದೇ ಅವರ ದೇಹಾಯಾಸವನ್ನು ನಿವಾರಿಸುತ್ತದೆ, ಯಾಂತ್ರೀಕರಣವು ಉದ್ಯೋಗ ನಷ್ಟದ ಪರಿಣಾಮ ಬೀರುತ್ತದೆ ಎಂಬುದು ಸಮುದಾಯಗಳ ತಪ್ಪು ತಿಳುವಳಿಕೆ ಆಗಿದೆ, ಹೀಗಿದ್ದರೂ ಇದು ಸತ್ಯಕ್ಕೆ ದೂರವಾದುದು. ಸಿಎಟಿಐಎನಂತಹ ಕಂಪ್ಯೂಟರ್ ಸಹಾಯದೊಂದಿಗಿನ (ಕಂಪ್ಯೂಟರ್ ಏಯ್ಡೆಡ್/ಕ್ಯಾಡ್) ವಿನ್ಯಾಸ ತಂತ್ರಾಂಶ (ಡಿಸೈನ್ ಸಾಫ್ಟ್‌ವೇರ್) ತರಬೇತಿ ಕೋರ್ಸ್‌ಗಳನ್ನೂ ಕೆಜಿಟಿಟಿಐ ಮೈಸೂರು ಒದಗಿಸುತ್ತಿದೆ. ಯಾವುದೇ ಉತ್ಪನ್ನದ ಅಭಿವೃದ್ಧಿಯಲ್ಲಿ ಕ್ಯಾಡ್ ಅತ್ಯಂತ ಅಗತ್ಯವಾಗಿದ್ದು ಇದು ಮಾದರಿಗಳ ಅಭಿವೃದ್ಧಿಯಲ್ಲಿ (ಪ್ರೊಟೊಟೈಪ್) ಮತ್ತು ಅವುಗಳ ಪರೀಕ್ಷೆಯಲ್ಲಿನ ಭಾರೀ ಪ್ರಮಾಣದ ಸಮಯವನ್ನು ಉಳಿತಾಯ ಮಾಡುತ್ತದೆ. ನೀಡಲಾಗಿರುವ ಕ್ಯಾಡ್ ತಂತ್ರಾಂಶದ ಮೂಲಕ ಉತ್ಪನ್ನವೊಂದನ್ನು ವಿನ್ಯಾಸಗೊಳಿಸುವಲ್ಲಿ ನಿಪುಣರಾದ ಎಂಜಿನಿಯರ್‌ಗಳಿಗೆ ಇದೀಗ ಭಾರೀ ಬೇಡಿಕೆ ಇದೆ. ಲೈನ್ ಸಿಎನ್‌ಸಿ ಟರ್ನಿಂಗ್ ಮತ್ತು ಮಿಲ್ಲಿಂಗ್‌ನಂತಹ ಉತ್ಪಾದನೆಯ ಸಾಂಪ್ರದಾಯಿಕ ವಿಭಾಗಗಳಲ್ಲೂ ಕೆಜಿಟಿಟಿಐ ಮೈಸೂರು ಕೋರ್ಸ್‌ಗಳನ್ನು ನಡೆಸುತ್ತಿದೆ. ತಮ್ಮ ತಮ್ಮ ಆಸಕ್ತಿದಾಯಕ ಕ್ಷೇತ್ರಗಳಲ್ಲಿ/ವಿಭಾಗಗಳಲ್ಲಿ ತರಬೇತಿ ಪಡೆಯಲು ಕೆಜಿಟಿಟಿಐ ಮೈಸೂರಿನಲ್ಲಿ ಒಟ್ಟು 9 ಬೇರೆ ಬೇರೆ ತರಬೇತಿ ಕೋರ್ಸ್‌ಗಳಿವೆ.

ಸೈಬರ್ ಸುರಕ್ಷತೆ ಮೇಲೆ ತರಬೇತಿ (ಕೋರ್ಸ್)ಗಳನ್ನು ನಡೆಸುತ್ತಿರುವ ಐಸಾಕ್ (ಮಾಹಿತಿ ಹಂಚಿಕೆ ಮತ್ತು ವಿಶ್ಲೇಷಣಾ ಕೇಂದ್ರ/ಇನ್‌ಫಾರ್ಮೇಷನ್ ಷೇರಿಂಗ್ ಅಂಡ್ ಅನಾಲಿಸಿಸ್ ಸೆಂಟರ್)ನೊಂದಿಗೆ ಕೆಜಿಟಿಟಿಐ ಮೈಸೂರು ಇತ್ತೀಚೆಗೆ ತಿಳುವಳಿಕೆ ಒಪ್ಪಂದ (ಎಂಒಯು)ಕ್ಕೆ ಸಹಿ ಮಾಡಿದೆ. ಯಾವುದೇ ಸೈಬರ್ ಅಪರಾಧ (ಸೈಬರ್ ಕ್ರೈಮ್)ಗಳನ್ನು ತಡೆಯಲು ಯುವ ಸಮೂಹ ಕೌಶಲ್ಯ ಹೊಂದಿರುವುದು ಸೈಬರ್ ಸುರಕ್ಷತೆಯ ಒಂದು ಕ್ಷೇತ್ರವಾಗಿದೆ. ಬಹುತೇಕ ಪ್ರತಿದಿನ ನಾವು ವಂಚನೆ, ಕದಿಯುವುದು (ಇಂಟರ್‌ನೆಟ್ ಮೂಲಕ ವ್ಯಕ್ತಿಯ ವೈಯಕ್ತಿಕ/ಹಣಕಾಸು ವಿಚಾರಗಳನ್ನು ಕದಿಯುವುದು) ಮೊದಲಾದ ಸುದ್ದಿಗಳನ್ನು ಕೇಳುತ್ತೇವೆ ಮತ್ತು ಬಹುತೇಕ ನೊಂದವರು (ಬಲಿಪಶುಗಳು) ಹಿರಿಯರೇ ಆಗಿರುತ್ತಾರೆ. ಆದಾಗ್ಯೂ, ಆನ್‌ಲೈನ್‌ನಲ್ಲಿ ಮಾಹಿತಿ/ಅಂಕಿ ಅಂಶ ಕಳ್ಳತನಕ್ಕೆ ಒಳಪಡುವ ಸಾಧ್ಯತೆ ಇದೆ. ಉತ್ತಮ ಉದಾಹರಣೆ ಎಂದರೆ ಕೃತಿಚೌರ್ಯ ಮಾಡಿದ (ಪೈರೇಟೆಡ್) ವೆಬ್‌ಸೈಟ್‌ಗಳು., ಸಿನೆಮಾಗಳನ್ನು ನೋಡಲು ಹಣ ಖರ್ಚು ಮಾಡಲು ಬಯಸದವರು ಉದಾಹರಣೆಗೆ, ಇಂತಹ ಒಂದು ಕೃತಿಚೌರ್ಯ ಮಾಡಿದ ವೆಬ್‌ಸೈಟ್ ಮೂಲಕ ಇದನ್ನು ವೀಕ್ಷಿಸುತ್ತಾರೆ, ಬಳಕೆ ಮಾಡಿದ ಪಾಸ್‌ವರ್ಡ್ ಸಮೇತ ಬ್ಯಾಂಕ್ ವಿವರಗಳು ಎಲ್ಲವೂ ಬಳಸಲಾದ ಉಪಕರಣದ ಸಂಪೂರ್ಣ ಮಾಹಿತಿಯು ಅಪಾಯದಲ್ಲಿದೆ ಎಂದು ವ್ಯಕ್ತಿಯು ಗುರುತಿಸದೇ ಹೋಗುತ್ತಾನೆ. ಈ ಸಂಭಾವ್ಯ ಅಪಾಯಗಳ ಕುರಿತು ಯುವ ಸಮುದಾಯವನ್ನು ಜಾಗೃತಗೊಳಿಸುವುದು ಮತ್ತು ಹಲವಾರು ಕೈಗಾರಿಕೆಗಳಿಗೆ ಹಾಗೂ ಎಂಎನ್‌ಸಿ(ಬಹುರಾಷ್ಟ್ರೀಯ ಕಂಪನಿ)ಗಳಿಗೆ



**ವಿದ್ಯಾವರ್ಧಕ ಐಟಿಐ ಕಾಲೇಜು , ಮೈಸೂರಿನ ಪ್ರಾಂಶುಪಾಲ ಶ್ರೀ ಸದಾಶಿವ ಗೌಡ ಅವರೊಂದಿಗೆ ನಿರ್ದೇಶಕರಾದ ಡಾ.ಕುಮಾರ್ ಅವರು ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕುತ್ತಿರುವುದು.**

ಸೈಬರ್ ಸುರಕ್ಷತಾ ಪರಿಹಾರಗಳನ್ನು ಒದಗಿಸುವುದು ಪ್ರಸ್ತುತ ಸಮಯದಲ್ಲಿ ಅಗತ್ಯವಾಗಿದೆ.

ಮೈಸೂರಿನಲ್ಲಿರುವ ಜೆಎಸ್‌ಎಸ್ ಸಂಸ್ಥೆಗಳ ವಿದ್ಯಾರ್ಥಿಗಳ ಆಸಕ್ತಿದಾಯಕ ಕ್ಷೇತ್ರಗಳಲ್ಲಿ ತರಬೇತಿ ಒದಗಿಸಲು ಕೆಜಿಟಿಟಿಐ ಮೈಸೂರು ಎಂಒಯು ಮಾಡಿಕೊಂಡಿದೆ. ಇದನ್ನೇ ಮಾಡಲು ಸಿಪಿಸಿ ಪಾಲಿಟೆಕ್ನಿಕ್‌ನೊಂದಿಗೂ ಎಂಒಯು ಸಹಿ ಮಾಡಿದೆ. ಕೆಜಿಟಿಟಿಐ ಮೈಸೂರಿನಲ್ಲಿ ಒದಗಿಸುತ್ತಿರುವ ವಿವಿಧ ತರಬೇತಿಗಳಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ನಾವು ತರಬೇತುಗೊಳಿಸಿದ್ದೇವೆ. ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನೊಂದಿಗೂ ಕೂಡ ಎಂಒಯುಗೆ ಸಹಿ ಮಾಡಲಾಗಿದೆ. ತಾಂತ್ರಿಕ ಮತ್ತು ತಾಂತ್ರಿಕೇತರಗಳೆರಡರಲ್ಲೂ ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಕೌಶಲ್ಯವನ್ನು ಬೆಳೆಸಲು ನಗರದ ಪ್ರತಿಷ್ಠಿತ ಸಂಸ್ಥೆಗಳು ಕೆಜಿಟಿಟಿಐ ಮೈಸೂರಿನೊಂದಿಗೆ ಸಮುದಾಯಗಳಲ್ಲಿ ಕೆಲಸ ಮಾಡುವುದು ಈ ಎಂಒಯುಗಳಿಗೆ ಸಹಿ ಮಾಡುವ ಉದ್ದೇಶವಾಗಿದೆ. ಇದರ ಪರಿಣಾಮವಾಗಿ ಕೆಜಿಟಿಟಿಐ ಮೈಸೂರು ಗುಣಮಟ್ಟದ ತರಬೇತಿ ಮತ್ತು ಪರಿಸರದ ಕುರಿತು ಜಾಗೃತಿ ಮೂಡಿಸಲು, ರಾಷ್ಟ್ರೀಯ ಐಕ್ಯತೆ ಮತ್ತು ವೈಜ್ಞಾನಿಕ ಚಿಂತನೆಗೆ ಯುವ ಸಮುದಾಯವನ್ನು ಪೂರ್ವಸಿದ್ಧತೆ ಮಾಡುವುದರ ಮೂಲಕ ಜಾಗತಿಕ ಶಾಂತಿ ಮತ್ತು ಗುಣಮಟ್ಟದ ಫಲಿತಾಂಶ ಆಧರಿತ ಕೌಶಲ್ಯ ತರಬೇತಿ ನೀಡಲು ಸಾಧ್ಯವಾಗಿದೆ.

ಕೆಜಿಟಿಟಿಐ ಮೈಸೂರು ಕುರಿತು ಪ್ರಾಚಾರ್ಯರು (ಪ್ರೊಫೆಸರ್‌ಗಳು), ಕೌಶಲ್ಯಯುತ ಕುಶಲಕರ್ಮಿಗಳು, ವಿದ್ಯಾರ್ಥಿಗಳು ಹಾಗೂ ಮೈಸೂರಿನ ಮತ್ತು ಸುತ್ತಮುತ್ತಲಿನ ಕೈಗಾರಿಕೆಗಳಲ್ಲಿ ಅರಿವು ಮೂಡಿಸಲಾಗಿದೆ. ಈ ಎಲ್ಲಾ ಕೋರ್ಸ್‌ಗಳು ಮೊದಲು ನಗರದಲ್ಲಿ ಲಭ್ಯವಿರಲಿಲ್ಲ, ಆದರೆ ಇದೀಗ ಕೆಜಿಟಿಟಿಐ ಮೈಸೂರು ತನ್ನ ಹೊಸ ಕೇಂದ್ರದೊಂದಿಗೆ ಯಾವುದೇ ವ್ಯಕ್ತಿಗಳಿಗೆ ಬಹು ಕೌಶಲ್ಯಗಳನ್ನು ಒದಗಿಸುತ್ತಿದೆ. ಈ ತಾಂತ್ರಿಕ ಕೌಶಲ್ಯಗಳೊಂದಿಗೆ, ಕೆಜಿಟಿಟಿಐ ಮೈಸೂರು ಸೂಕ್ಷ್ಮ (ಸಾಫ್ಟ್) ಕೌಶಲ್ಯಗಳ ಕಡೆಗೂ ಗಮನಹರಿಸುತ್ತಿದೆ. ಸಾಫ್ಟ್ ಕೌಶಲ್ಯ ತರಬೇತಿಯಲ್ಲಿ ಅತ್ಯುತ್ತಮ ಸಾಧನೆಗಾಗಿ ಮೈಸೂರು ಕೇಂದ್ರವು ವಾದ್ವಾನಿ ಫೌಂಡೇಶನ್‌ನಿಂದ ಗುರುತಿಸಲ್ಪಟ್ಟಿದೆ. ಗುಣಮಟ್ಟದ ತರಬೇತಿ ಮತ್ತು ಪ್ರತಿ ಯುವಕರಿಗೂ ಅವಕಾಶವನ್ನು ನೀಡುವುದರ ಮೂಲಕ ಅವರಲ್ಲಿ ಮೌಲ್ಯವನ್ನು ಬಿತ್ತುವುದು ಮತ್ತು ಕೌಶಲ್ಯದ ಮೂಲಕ ಅತ್ಯುತ್ಕೃಷ್ಟತೆಯ ದೃಷ್ಟಿಕೋನದೊಂದಿಗೆ ಅವರ ಜೀವನವನ್ನು ಪರಿವರ್ತಿಸಲು ಸಂಘಟಿತ ಮತ್ತು ಅಸಂಘಟಿತ ವಲಯವನ್ನು ತಲುಪುವ ಗುರಿಯನ್ನು ಕೆಜಿಟಿಟಿಐ ಮೈಸೂರು ಹೊಂದಿದೆ.

# ಉದ್ಯಮಶೀಲರ ವ್ಯಕ್ತಿ ಚಿತ್ರ ವಿವರಣೆ

ಮಹಿಳಾ ಸಾಧಕರು

| | |
|---|---|
| ಉದ್ಯಮಿಯ ಹೆಸರು | **ಶ್ರೀಮತಿ ಚಂದ್ರಕಲಾ** |
| ದೂರವಾಣಿ ಸಂಖ್ಯೆ | **9379828249** |
| ಸಿಡಾಕ್‌ನಿಂದ ಪಡೆದ ತರಬೇತಿಯ ಹೆಸರು | **ಆರು ದಿನಗಳ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ(27-02-2023 ರಿಂದ 04-03-2023) (ಸಂಜೀವಿನಿ - ಕೆ.ಎಸ್.ಆರ್.ಎಲ್.ಪಿ.ಎಸ್)** |
| ತರಬೇತಿಯ ವರ್ಷ | **2022-23** |
| ಉದ್ಯಮದ ಹೆಸರು ಮತ್ತು ವಿಳಾಸ | **ಸಮೃದ್ಧಿ ಫ್ಯಾನ್ಸಿ ಸ್ಟೋರ್ ಆ್ಯಂಡ್ ಕ್ಲಾತ್ ಸೆಂಟರ್. ದೊಡ್ಡಜಾಲ, ಬಸವಣ್ಣನ ದೇವಸ್ಥಾನದ ಹತ್ತಿರ, ಜಾಲ ಪೋಸ್ಟ್, ಜಾಲ ಹೋಬಳಿ, ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.** |
| ಚಟುವಟಿಕೆ(ಉತ್ಪನ್ನದ ಹೆಸರು/ಸೇವೆಯ ಹೆಸರು) | **ಜವಳಿ ಮಾರಾಟ ಮತ್ತು ಬಟ್ಟೆ ಹೊಲಿಯುವುದು.** |
| ಉದ್ಯಮ ಆರಂಭಿಸಿದ ವರ್ಷ | **2021** |
| ಬಂಡವಾಳ ಹೂಡಿಕೆ | **ಸ್ವಂತ ಬಂಡವಾಳ ರೂ.15,00,000/-** |
| ಉದ್ಯೋಗ ಸೃಷ್ಟಿ | **04** |



ಶ್ರೀಮತಿ. ಚಂದ್ರಕಲಾರವರು 47 ವರ್ಷ ವಯಸ್ಸಿನವರಾಗಿದ್ದು, ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಇವರು 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ಸದರಿಯವರು ಸ್ವಯಂ ಉದ್ಯೋಗ ಮಾಡುವ ಆಸಕ್ತಿಯನ್ನು ಹೊಂದಿದ್ದು, ತನ್ನ ಸ್ವಂತ ಶ್ರಮ ಹಾಗೂ ಕುಟುಂಬಸ್ಥರ ಸಹಕಾರದೊಂದಿಗೆ ಜವಳಿ ಮಾರಾಟ ಮತ್ತು ಬಟ್ಟೆ ಹೊಲಿಯುವ ಉದ್ಯಮವನ್ನು ನಡೆಸುತ್ತಿದ್ದಾರೆ. ಸದರಿಯವರು ಸಂಜೀವಿನಿ- ಕೆ.ಎಸ್.ಆರ್.ಎಲ್.ಪಿ.ಎಸ್ ಯೋಜನೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಸಾಯಿ ರಾಮ ಸ್ತ್ರೀ ಶಕ್ತಿ ಸಂಘದ ಸದಸ್ಯರಾಗಿದ್ದು ಸುಮಾರು 15 ವರ್ಷಗಳಿಂದ ಉತ್ತಮ ಸದಸ್ಯರಾಗಿ ಕಾರ್ಯ ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ.

ಶ್ರೀಮತಿ ಚಂದ್ರಕಲಾರವರು ಈ ಉದ್ಯಮವನ್ನು ಪ್ರಾರಂಭಿಸುವ ಉದ್ದೇಶದಿಂದ ರೂ. 15,00,000/– ಸ್ವಂತ ಬಂಡವಾಳವನ್ನು ಹೂಡಿ ತಮ್ಮ ಸ್ವಂತ ಜಾಗದಲ್ಲಿ ಸಮೃದ್ಧಿ ಫ್ಯಾನ್ಸಿ ಸ್ಟೋರ್ ಅಂಡ್ ಕ್ಲಾತ್ ಸೆಂಟರ್ ಎಂಬ ಹೆಸರಿನಿಂದ ಈ ಉದ್ಯಮವನ್ನು 2021 ರಲ್ಲಿ ದೊಡ್ಡಜಾಲ, ಬಸವಣ್ಣನ ದೇವಸ್ಥಾನದ ಹತ್ತಿರ, ಜಾಲ ಪೋಸ್ಟ್, ಜಾಲ ಹೋಬಳಿ, ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇಲ್ಲಿ ಪ್ರಾರಂಭಿಸಿ ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಸದರಿಯವರು ಉತ್ತಮ ಹಣಕಾಸಿನ ನಿರ್ವಹಣೆ ಮಾಡುತ್ತಾ ಪ್ರತಿ ತಿಂಗಳು ರೂ. 30,000/– ರಿಂದ 40,000/–ಗಳವರೆಗೆ ಮಾರಾಟದಿಂದ ಆದಾಯಗಳಿಸುತ್ತಿದ್ದಾರೆ.

ಶ್ರೀಮತಿ ಚಂದ್ರಕಲಾರವರು ಉದ್ಯಮ ಪ್ರಾರಂಭದ ಹಂತದಲ್ಲಿ ಗ್ರಾಹಕರ ಕೊರತೆ ಹಾಗೂ ಗುಣಮಟ್ಟದ ಬಟ್ಟೆಗಳ ಆಯ್ಕೆ ಮಾಡುವ ಬಗ್ಗೆ ಮಾಹಿತಿಯ ಕೊರತೆಯ ಸಮಸ್ಯೆಯನ್ನು ಅನುಭವಿಸಿದರು. ಈ ಕ್ಷೇತ್ರದಲ್ಲಿ ತೀವ್ರ ಸ್ಪರ್ಧೆ ಇರುವುದರಿಂದ ಸದರಿ ಉದ್ಯಮದಲ್ಲಿ ಅತಿಯಾದ ಏರಿಳಿತ ಕಂಡುಬಂದ ಕಾರಣ ಲಾಭಾಂಶದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಎದುರಿಸಬೇಕಾಯಿತು. ಅಂತಹ ಸಂದರ್ಭಗಳನ್ನು ಯಶಸ್ವಿಯಾಗಿ ಎದುರಿಸಿ ಛಲ ಬಿಡದೆ ಆತ್ಮ ವಿಶ್ವಾಸದಿಂದ ಉದ್ಯಮವನ್ನು ನಡೆಸಿರುತ್ತಾರೆ.

ಶ್ರೀಮತಿ ಚಂದ್ರಕಲಾರವರು ಸಿಡಾಕ್ ಸಂಸ್ಥೆಯಿಂದ 2022–23ನೇ ಸಾಲಿನಲ್ಲಿ ಆಯೋಜಿಸಲಾದ ಸಂಜೀವಿನಿ–ಕೆ.ಎಸ್.ಆರ್.ಎಲ್.ಪಿ.ಎಸ್ ಯೋಜನೆ ಅಡಿಯಲ್ಲಿ ಸ್ವ–ಸಹಾಯ ಸಂಘದ ಮಹಿಳಾ ಸದಸ್ಯರುಗಳಿಗೆ ಹಮ್ಮಿಕೊಂಡಿದ್ದ 06 ದಿನಗಳ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಯಾಗಿ ತರಬೇತಿಯನ್ನು ಪೂರ್ಣಗೊಳಿಸಿರುತ್ತಾರೆ. ಈ ತರಬೇತಿ ಕಾರ್ಯಕ್ರಮದಲ್ಲಿ





ನೀಡಲಾದ ಉದ್ಯಮಶೀಲತಾ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳಾದ ಉದ್ಯಮಶೀಲರ ಸಾಮರ್ಥ್ಯ, ಉದ್ಯಮ ನಿರ್ವಹಣೆ, ಮಾರುಕಟ್ಟೆ ನಿರ್ವಹಣೆ, ವಿವಿಧ ಸರ್ಕಾರಿ ಸಂಸ್ಥೆಗಳಿಂದ ದೊರೆಯುವ ಸೌಲಭ್ಯಗಳು ಮತ್ತು ಯೋಜನಾ ವರದಿ ತಯಾರಿಕೆ ಇನ್ನೂ ಮುಂತಾದ ವಿಷಯಗಳ ಭೋದನೆಯ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಈ ಕಾರ್ಯಕ್ರಮವು ತಮ್ಮ ಉದ್ಯಮದಲ್ಲಿ ಹೆಚ್ಚಿನ ಗ್ರಾಹಕರನ್ನು ಆಕರ್ಷಿಸಲು ಹಾಗೂ ಲಾಭಾಂಶದ ಪ್ರಮಾಣವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಹಕಾರಿಯಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ. ಇವರು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ಸಂಜೀವಿನಿ–ಕೆ.ಎಸ್.ಆರ್.ಎಲ್.ಪಿ.ಎಸ್, ಬೆಂಗಳೂರು, ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ಧಾರವಾಡ ಹಾಗೂ ಸಿಡಾಕ್, ಬೆಂಗಳೂರು ನಗರ ಇವರ ಪ್ರೋತ್ಸಾಹ ಮತ್ತು ಮಾರ್ಗದರ್ಶನಕ್ಕೆ ಸದಾ ಚಿರಋಣಿಯಾಗಿರುತ್ತೇನೆ ಎಂದು ತಿಳಿಸಿರುತ್ತಾರೆ.

ಶ್ರೀಮತಿ ಚಂದ್ರಕಲಾರವರು ಪ್ರಸ್ತುತ ಜವಳಿ ಮಾರಾಟ ಮತ್ತು ಸಿದ್ದ ಉಡುಪು ತಯಾರಿಕೆಯ ಉದ್ಯಮವನ್ನು ಯಶಸ್ವಿಯಾಗಿ ನಡೆಸುತ್ತಿದ್ದು, ಈ ಉದ್ಯಮವನ್ನು ಮುಂದಿನ ದಿನಗಳಲ್ಲಿ ಬ್ಯಾಂಕ್‌ನಿಂದ ಹಣಕಾಸು ನೆರವು ಪಡೆದು ಎಲ್ಲ ವರ್ಗದ ಜನರಿಗೆ ಅವರ ಅಭಿರುಚಿಗನುಗುಣವಾಗಿ ವಿವಿಧ ವಿನ್ಯಾಸದ ಬಟ್ಟೆಗಳನ್ನು ಸರಬರಾಜು ಮಾಡುವ ಉದ್ದೇಶದಿಂದ ಸದರಿ ಉದ್ಯಮವನ್ನು ವಿಸ್ತರಿಸಬೇಕೆಂಬ ಗುರಿಯನ್ನು ಹೊಂದಿದ್ದಾರೆ ಹಾಗೂ ಹೆಚ್ಚಿನ ಗ್ರಾಹಕರನ್ನು ಆಕರ್ಷಿಸಿ ಅವರಿಗೆ ಉನ್ನತ ಮಟ್ಟದ ಸೇವೆಯನ್ನು ಒದಗಿಸ ಬೇಕೆಂಬ ಮಹದಾಸೆ ಅವರದ್ದಾಗಿದೆ.

# ಖಾದ್ಯ ತೈಲ ಉತ್ಪಾದನೆಯಲ್ಲಿ ಬಾಬುರಾವ ಮೇಲುಗೈ

| | |
|---|---|
| ಉದ್ಯಮಿಯ ಹೆಸರು | **ಶ್ರೀ ಸತೀಶ ತಂದೆ ಬಾಬುರಾವ** |
| ದೂರವಾಣಿ ಸಂಖ್ಯೆ | **8151011367** |
| ಸಿಡಾಕ್‌ನಿಂದ ಪಡೆದ ತರಬೇತಿಯ ಹೆಸರು | **10 ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ (16-06-2022 ರಿಂದ 27-06-2022)** |
| ತರಬೇತಿಯ ವರ್ಷ | **2022-23** |
| ಉದ್ಯಮದ ಹೆಸರು ಮತ್ತು ವಿಳಾಸ | **ಶ್ರೀ ಬೋಮಗೊಂಡೇಶ್ವರ ಖಾದ್ಯ ತೈಲ ಉತ್ಪಾದನಾ ಘಟಕ, ಗ್ರಾ/ ಹೋಳಸಮುದ್ರ, ತಾ/ ಕಮಲನಗರ, ಜಿ/ ಬೀದರ** |
| ಚಟುವಟಿಕೆ (ಉತ್ಪನ್ನದ ಹೆಸರು/ಸೇವೆಯ ಹೆಸರು) | **ಖಾದ್ಯ ತೈಲ ಉತ್ಪಾದನಾ ಘಟಕ** |
| ಉದ್ಯಮ ಆರಂಭಿಸಿದ ವರ್ಷ | **2022** |
| ಬಂಡವಾಳ ಹೂಡಿಕೆ | **ಬ್ಯಾಂಕ ಸಾಲ ರೂ. 9,00,000-00**<br>**ಸ್ವಂತ ಬಂಡವಾಳ ರೂ. 1,00,000-00** |
| ಉದ್ಯೋಗ ಸೃಷ್ಟಿ | **04** |



ಶ್ರೀ ಸತೀಶ ಇವರು ಪರಿಶಿಷ್ಟ ಪಂಗಡದವರಾಗಿದ್ದು, ಪಿ.ಯು.ಸಿ.ವರೆಗೆ ಶಿಕ್ಷಣವನ್ನು ಪಡೆದಿರುತ್ತಾರೆ. ಸದರಿಯವರು ಸ್ವಂತ ಉದ್ಯೋಗ ಮಾಡುವ ಉದ್ದೇಶದಿಂದ ಒಂದು ಸಣ್ಣ ಖಾದ್ಯ ತೈಲ ಉತ್ಪಾದನಾ ಘಟಕದಲ್ಲಿ ಅನುಭವವನ್ನು ಪಡೆದರು. ಸದರಿ ಅನುಭವದ ಆಧಾರದ ಮೇಲೆ ತಮ್ಮದೇ ಆದ ಖಾದ್ಯ ತೈಲ ಉತ್ಪಾದನಾ ಘಟಕವನ್ನು ಪ್ರಾರಂಭಿಸಲು ನಿರ್ಧರಿಸಿದರು. ಶ್ರೀ ಸತೀಶ ಅವರು ಖಾದ್ಯ ತೈಲಕ್ಕೆ ಇರುವ ಬೇಡಿಕೆ ಹಾಗೂ ಮಾರುಕಟ್ಟೆ ಅವಕಾಶಗಳನ್ನು ಗುರುತಿಸಿ ಕುಟುಂಬದ ಸಹಕಾರದಿಂದ ಖಾದ್ಯ ತೈಲ ಉತ್ಪಾದನಾ ಘಟಕವನ್ನು ನಡೆಸುತ್ತಿದ್ದಾರೆ.

ಸದರಿಯವರು ಸಿಡಾಕ್ ಸಂಸ್ಥೆಯಿಂದ 2022-23 ನೇ ಸಾಲಿನಲ್ಲಿ ಆಯೋಜಿಸಲಾದ 10 ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮದಲ್ಲಿ ತರಬೇತಿಯನ್ನು ಪಡೆದುಕೊಂಡಿದ್ದು, ಸದರಿ ತರಬೇತಿ ಕಾರ್ಯಕ್ರಮದಿಂದ ಪ್ರೇರಣೆಗೊಂಡು ಶ್ರೀ ಸತೀಶರವರು ಗ್ರಾ/ ಹೋಳಸಮೂದ್ರ, ತಾ/ ಕಮಲನಗರ, ಜಿಲ್ಲೆ/ ಬೀದರ

ಇಲ್ಲಿ ಮೇ// ಶ್ರೀ. ಬೋಮಗೊಂಡೇಶ್ವರ ಎಂಬ ಹೆಸರಿನಿಂದ "ಖಾದ್ಯ ತೈಲ ಉತ್ಪಾದನಾ ಘಟಕವನ್ನು" ನಡೆಸುತ್ತಿದ್ದಾರೆ. ಅವರು ರಾಜ್ಯ ಸರ್ಕಾರದ ಟಿ ಎಸ್ ಪಿ ಯೋಜನೆಯಡಿಯಲ್ಲಿ ಭಾರತಿಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕನಿಂದ ರೂ. 9,00,000/– ಸಾಲ ಪಡೆದುಕೊಂಡು ಹಾಗೂ ರೂ. 1,00,000/– ಸ್ವಂತ ಬಂಡವಾಳವನ್ನು ಹೂಡಿ ಉತ್ತಮ ರೀತಿಯಲ್ಲಿ ಉದ್ಯಮವನ್ನು ನಿರ್ವಹಣೆ ಮಾಡಿಕೊಂಡು ಹೋಗುತ್ತಿದ್ದಾರೆ. ಈ ಉದ್ಯಮದಿಂದ ಅವರು ಪ್ರತಿ ತಿಂಗಳು ರೂ 2,00,000/–ವರೆಗೆ ಮಾರಾಟದ ಆದಾಯ ಹೊಂದಿದ್ದಾರೆ. ಇವರು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಪ್ರಾಯೋಕತ್ವದ 10 ದಿನಗಳ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ನೀಡಿದಕ್ಕಾಗಿ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ,(ಸಿಡಾಕ್), ಧಾರವಾಡ ಹಾಗೂ ಸಿಡಾಕ್ ಬೀದರ ಇವರಿಗೆ ಧನ್ಯವಾದಗಳನ್ನು ತಿಳಿಸುತ್ತಾರೆ.

ಶ್ರೀ ಸತೀಶರವರು ಈ ಉದ್ಯಮವನ್ನು ಪ್ರಾರಂಭಿಸಿದ, ಪ್ರಾರಂಭಿಕ ಹಂತದಲ್ಲಿ ಹಣಕಾಸಿನ ಸಮಸ್ಯೆಯನ್ನು ಎದುರಿಸಿದರು. ನಂತರ ಅವರು ತನ್ನ ಉತ್ಪನ್ನಗಳ ಬಗ್ಗೆ ಸಾದ್ಯತಾ ಯೋಜನಾ ವರದಿಯನ್ನು ತಯಾರಿಸಿ ಬ್ಯಾಂಕನವರಿಗೆ ಮನವೊಲಿಸಿ ಸಾಲವನ್ನು ಪಡೆಯುವಲ್ಲಿ ಯಶಸ್ವಿಯಾದರು. ಸದರಿಯವರು ಉತ್ಪನ್ನಗಳ ಗುಣಮಟ್ಟವನ್ನು ತಿಳಿದುಕೊಳ್ಳುವ ಉದ್ದೇಶದಿಂದ ಕುಶಬಿ ಉತ್ಪಾದಕರಿಂದ ಕಚ್ಚಾ ವಸ್ತುವನ್ನು ಪಡೆದು ಅವರಿಗೆ ಕುಶಬಿ ಬೀಜದಿಂದ ಎಣ್ಣೆಯನ್ನು ತಯಾರಿಸಿಕೊಡುವ ಸೇವೆಯನ್ನು ನೀಡುತ್ತಿದ್ದರು. ಸದರಿ ಉತ್ಪನ್ನಗಳ ಗುಣಮಟ್ಟ ಖಾತ್ರಿಯಾದ ನಂತರ ಕಚ್ಚಾ ವಸ್ತುಗಳನ್ನು ಖರೀದಿಸಿ ಕುಶಬಿ ಬೀಜದಿಂದ ಎಣ್ಣೆಯನ್ನು ತಯಾರಿಸಲು ಪ್ರಾರಂಭಿಸಿದರು. ಇದರಿಂದ ಅವರಲ್ಲಿ ಸಮಸ್ಯೆಗಳನ್ನು ಯಶಸ್ವಿಯಾಗಿ ಪರಿಹರಿಸುವ ಮನೋಭಾವನೆ ಎದ್ದು ಕಾಣುತ್ತದೆ.

ಇವರು ಸಿಡಾಕ್ ಸಂಸ್ಥೆಯ ವತಿಯಿಂದ 10 ದಿನಗಳ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ ಎಂಬುದನ್ನು ದಿನಪತ್ರಿಕೆಗಳಿಂದ ತಿಳಿದುಕೊಂಡು ಸಿಡಾಕ್ ಬೀದರ ಸಂಸ್ಥೆಗೆ ಭೇಟಿ ನೀಡಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡರು.

ಸದರಿಯವರು ಈ ಕಾರ್ಯಕ್ರಮದಲ್ಲಿ ಆಸಕ್ತಿಯಿಂದ ಭಾಗವಹಿಸಿ ಕಾರ್ಯಕ್ರಮದಲ್ಲಿ ತಿಳಿಸಿದ ವಿಷಯಗಳಾದ ಸಣ್ಣ ಹಾಗೂ ಮಧ್ಯಮ ಉದ್ಯಮಗಳಿಗೆ ದೊರೆಯುವ ಸೌಲಭ್ಯಗಳು, ಜಿ.ಎಸ್.ಟಿಯ ಅನ್ವಯಿಸುವಿಕೆ, ಯೋಜನಾ ವರದಿ ತಯಾರಿಕೆ, ಲೆಕ್ಕಪತ್ರ ನಿರ್ವಹಣೆ ಮುಂತಾದ ವಿಷಯಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡರು. ಸಿಡಾಕ್ ಬೀದರ ಸಂಸ್ಥೆಯ ಮಾರ್ಗದರ್ಶನದ ನೆರವಿನಿಂದ ಟಿಎಸ್‌ಪಿ ಯೋಜನೆಯಡಿಯಲ್ಲಿ ಸಾಲಕ್ಕೆ ಅರ್ಜಿಯನ್ನು ಸಲ್ಲಿಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕನಿಂದ ಸಾಲವನ್ನು ಪಡೆದುಕೊಂಡರು. ಈ ನಿಟ್ಟಿನಲ್ಲಿ ಸಿಡಾಕ್ ಬೀದರ ಸಂಸ್ಥೆಯು ತರಬೇತಿಯಲ್ಲಿ ಒದಗಿಸಿದ ಮಾಹಿತಿ, ಉದ್ಯಮ ಸ್ಥಾಪನೆಗೆ ನೀಡಿದ ಮಾರ್ಗದರ್ಶನ ಹಾಗೂ ಮೇಲಿನ ಯೋಜನೆಯಡಿಯಲ್ಲಿ ಸಾಲ ಪಡೆಯಲು ನೀಡಿದ ಪ್ರೋತ್ಸಾಹವನ್ನು ಈಗಲೂ ನೆನೆಸುತ್ತಾರೆ. ಸಿಡಾಕ್ ಸಂಸ್ಥೆಯು ಭಾವಿ ಉದ್ಯಮಶೀಲರಿಗೆ ಮಾರ್ಗದರ್ಶನ ನೀಡುವಲ್ಲಿ ಉತ್ತಮ ಪರಿಣಿತ ಸಂಸ್ಥೆಯಾಗಿದೆ ಎಂದು ಅಭಿಪ್ರಾಯಪಡುತ್ತಾರೆ.

ಶ್ರೀ ಸತೀಶ ಅವರು ಪ್ರಸ್ತುತ ಕುಶಬಿ ಬೀಜದ ಎಣ್ಣೆಯನ್ನು ಮಾತ್ರ ಉತ್ಪಾದನೆ ಮಾಡುತ್ತಿದ್ದು ಭವಿಷ್ಯದಲ್ಲಿ ಶೇಂಗಾ ಬೀಜದ ಎಣ್ಣೆ ಮತ್ತು ಸೂರ್ಯಕಾಂತಿ ಬೀಜದ ಎಣ್ಣೆಯನ್ನು ಉತ್ಪಾದಿಸುವ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಸದರಿಯವರು ಕುಶಬಿ ಬೀಜದ ಎಣ್ಣೆಯನ್ನು ಉತ್ಪಾದಿಸಿ ಅದನ್ನು 5 ಕೆ. ಜಿ, 10 ಕೆ. ಜಿ & 15 ಕೆ. ಜಿ ಪ್ರಾಮಾಣದ ಕ್ಯಾನ್‌ಗಳ ಮೂಲಕ ಮಾರಾಟ ಮಾಡುತ್ತಿದ್ದಾರೆ. ಇದನ್ನು ಮುಂದಿನ ದಿನಗಳಲ್ಲಿ 1 ಕೆ.ಜಿ. ತೂಕದ ಬ್ರ್ಯಾಂಡನ್ನು ಹೊಂದಿದ ಪಾಕೇಟ್‌ಗಳ ಮುಖಾಂತರ ಮಾರಾಟ ಮಾಡುವ ಗುರಿಯನ್ನು ಹೊಂದಿದ್ದಾರೆ. ಸದರಿಯವರು ಹೆಚ್ಚಿನ ಹಣಕಾಸಿನ ಸೌಲಭ್ಯವನ್ನು ಪಡೆದು, ನಗರಗಳಲ್ಲಿ ಗುಣಮಟ್ಟದ ಉತ್ಪನ್ನಗಳನ್ನು ಸರಬರಾಜು ಮಾಡಿ ಉನ್ನತ ಸ್ಥಿರ ಬ್ರ್ಯಾಂಡ್‌ನ್ನು ಹೊಂದುವ ಕನಸು ಹೊಂದಿದ್ದಾರೆ.

**ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್)**

(0836) 2486836, 2486694

dircedok@gmail.com

www.cedokdwd.karnataka.gov.in

ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

# ಕುಟುಂಬ ನಿರ್ವಹಣೆಗೆ ನಗರಗಳಿಗೆ ಉದ್ಯೋಗ ಬಯಸಿ ಬರುವವರಿಗೆ ಮತ್ತು ಕುಟುಂಬದ ನಿರ್ಲಕ್ಷ್ಯಕ್ಕೆ ಒಳಗಾದವರಿಗೆ ಆಸರೆಯಾದ

# ಯಾದಗಿರಿ ನಿರಾಶ್ರಿತರ ಆಶ್ರಯ ಕೇಂದ್ರ












▪ **ಶ್ರೀ ಚಂದ್ರಕಾಂತ ಹಿರೇಮಠ**

ಮಾನವ ಹುಟ್ಟಿನಿಂದ ಶ್ರೀಮಂತ ಬಡವನೆನಿಸಿಕೊಳ್ಳುವುದಿಲ್ಲ, ಬೆಳೆದಂತೆಲ್ಲಾ ಶ್ರೀಮಂತ ಮತ್ತು ಬಡವ ಎಂಬ ಭಾವನೆಗಳು ಹುಟ್ಟಿಕೊಳ್ಳುತ್ತವೆ. ಪ್ರಸ್ತುತ ಭಾರತ ದೇಶವು ಅತ್ಯಂತ ಪ್ರಭಾವಶಾಲಿ ಆರ್ಥಿಕತೆಯನ್ನು ಹೊಂದಿದ್ದು, ಪ್ರಪಂಚದಲ್ಲಿ ಅತ್ಯಂತ ಬೃಹತ್ ಆರ್ಥಿಕತೆಯನ್ನು ಹೊಂದಿದ 5ನೇ ರಾಷ್ಟ್ರವಾಗಿದೆ. 1947ರಲ್ಲಿ 340 ಮಿಲಿಯನ್‌ನಷ್ಟು ಜನಸಂಖ್ಯೆ ಹೊಂದಿದ್ದು ಕೇವಲ ಶೇ.12ರಷ್ಟು ಸಾಕ್ಷರತೆ ಹೊಂದಿರುವ ಭಾರತ ಸುಮಾರು ಶೇ. 60 ಕ್ಕಿಂತ ಹೆಚ್ಚಿಗೆ ಜನರು ಬಡತನ ರೇಖೆಯ ಕೆಳಗಡೆ ವಾಸಿಸುತ್ತಿದ್ದರು ಎನ್ನುವ ಅಂಕಿ ಅಂಶಗಳು ಮಾನವನ ನಿಕೃಷ್ಟ ಜೀವನ ಪದ್ಧತಿಯನ್ನು ತೋರಿಸುತ್ತದೆ. ಬಡತನ ಎಂಬ ವಿಷಾನಿಲ ನಗರ ಮತ್ತು ಗ್ರಾಮೀಣ ಪ್ರದೇಶಗಳೆಂದು ಭೇದ ಭಾವ ಮಾಡದೇ ಆರ್ಥಿಕತೆಯನ್ನು ಸಂಪೂರ್ಣವಾಗಿ ವಿನಾಶ ಮಾಡುತ್ತದೆ

ಎಂಬುದನ್ನು ಅರಿತು ಕೇಂದ್ರ ಸರಕಾರದಿಂದ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಪ್ರತ್ಯೇಕವಾಗಿ ಬಡತನ ನಿರ್ಮೂಲನೆಗಾಗಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಇಂತಹ ಯೋಜನೆಗಳಿಂದಾಗಿ ಬಡತನ ನಿರ್ಮೂಲನೆ ಮಾಡಲಾಗಿದ್ದು ಹೆಮ್ಮೆಯ ವಿಷಯವೆನಿಸಿದ್ದು, ನಗರ ಪ್ರದೇಶದಲ್ಲಿ ನೆಹರು ರೋಜಗಾರ್ ಯೋಜನೆಯಿಂದ ಪ್ರಾರಂಭವಾಗಿ ದೀನ ದಯಾಳ್ ಅಂತ್ಯೋದಯ ಅಭಿಯಾನ (ಡೇ-ನಲ್ಮ್) ದವರೆಗೆ ನಗರ ಪ್ರದೇಶದಲ್ಲಿ ಬಡತನ ನಿರ್ಮೂಲನೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, 2014-15ನೇ ಸಾಲಿನಿಂದ ನಗರ ವಸತಿ ರಹಿತರಿಗೆ ಆಶ್ರಯ ಕಲ್ಪಿಸಿಕೊಡುವ ಉದ್ದೇಶದಿಂದಾಗಿ ಡೇ-ನಲ್ಮ್ ಅಭಿಯಾನದಡಿ ಉಪಘಟಕವನ್ನಾಗಿ ಸೇರ್ಪಡೆಗೊಳಿಸಲಾಯಿತು.

## ನಗರ ಪ್ರದೇಶಗಳಲ್ಲಿ ಬಡತನ ನಿರ್ಮೂಲನೆ ಕಾರ್ಯಕ್ರಮಗಳು ನಡೆದು ಬಂದ ದಾರಿ:

ಭಾರತ ದೇಶದಲ್ಲಿ ನಗರ ಪ್ರದೇಶಗಳಲ್ಲಿ ಬೆಳೆಯುತ್ತಿರುವ ಬಡತನವನ್ನು ಕಡಿಮೆ ಮಾಡುವ ಉದ್ದೇಶದಿಂದಾಗಿ ಸ್ವಾತಂತ್ರ್ಯ ಪೂರ್ವದಿಂದಲೂ ಪ್ರಯತ್ನಗಳು ನಡೆಯುತ್ತಲೇ ಇವೆ. ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ಜನಸಂಖ್ಯೆಯ ವಲಸೆ ಪ್ರಮಾಣದಿಂದಾಗಿ ನಗರ ಪ್ರದೇಶಗಳಲ್ಲಿ ಜನಸಂಖ್ಯೆಯ ಪ್ರಮಾಣ ಹೆಚ್ಚಾಗುತ್ತಿದ್ದು, ನಿರುದ್ಯೋಗ ಪ್ರಮಾಣ ಹೆಚ್ಚಾಗುವುದರೊಂದಿಗೆ ಬಡತನ ಪ್ರಮಾಣ ಹೆಚ್ಚಾಗುತ್ತಿರುವ ಬಗ್ಗೆ ಹಲವಾರು ಸಂಶೋಧನಾ ವರದಿಗಳು ಬಿಚ್ಚಿಟ್ಟಿವೆ. ಇಂತಹ ಹೆಚ್ಚಾಗುತ್ತಿರುವ ಬಡತನ ಪ್ರಮಾಣವನ್ನು ಕಡಿಮೆ ಮಾಡಲು ಈ ಕೆಳಗಿನಂತೆ ಯೋಜನೆಗಳನ್ನು ಜಾರಿಗೆ ತರಲಾಗಿರುತ್ತದೆ.

ನಗರ ಪ್ರದೇಶದಲ್ಲಿನ ಬಡತನ ಕಡಿಮೆ ಮಾಡಲು ನಗರ ಪ್ರದೇಶದ ನಿರುದ್ಯೋಗ ಯುವಕ ಯುವತಿಯರಿಗೆ ಉದ್ಯೋಗ ನೀಡುವ ಉದ್ದೇಶದೊಂದಿಗೆ ನೆಹರು ರೋಜಗಾರ್ ಯೋಜನೆಯನ್ನು ಜಾರಿಗೆ ತರಲಾಯಿತು, ಸದರಿ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಕೊರತೆಯಿಂದಾಗಿ ಸಂಪೂರ್ಣವಾಗಿ ಯಶಸ್ವಿಯಾಗದೇ ಇದನ್ನು 1990 ರಲ್ಲಿ Urban Basic Service for the Poor (UBSP) ಎಂದು ಹೆಸರನ್ನು ಬದಲಾಯಿಸಿತು. ಆದರೆ ಈ ಯೋಜನೆಯ ಉದ್ದೇಶವು ಸಹ ನಿರುದ್ಯೋಗ ಯುವಕ-ಯುವತಿಯರಿಗೆ ಕೌಶಲ್ಯವನ್ನು ಮೇಲ್ದರ್ಜೆಗೇರಿಸಿ ಉದ್ಯೋಗವಕಾಶವನ್ನು ಕಲ್ಪಿಸಿಕೊಡುವುದಾಗಿತ್ತು. ಇದಾದ ನಂತರ 1995ರಲ್ಲಿ Prime Minister's Integrated urban Poverty Eradication Programme (PMIUPAY) ಎಂಬ ಯೋಜನೆಯನ್ನು ಜಾರಿಗೆ ತರಲಾಯಿತು. ಸದರಿ ಯೋಜನೆಯ ಪ್ರಮುಖ ಉದ್ದೇಶ ನಗರ ಪ್ರದೇಶದಲ್ಲಿ ಬಡ ಜನರ ಜೀವನ ಗುಣಮಟ್ಟ ಸುಧಾರಣೆಯ ಮೂಲ ಸೌಲಭ್ಯಗಳನ್ನು ಒದಗಿಸುವುದು ಆಗಿತ್ತು.

ಮುಂದುವರೆದು ನೆಹರು ರೋಜಗಾರ್, ಯುಬಿಎಸ್‌ಪಿ ಹಾಗೂ PMIUPAY ಯೋಜನೆಗಳ ಮಾರ್ಪಾಡು ಉದ್ದೇಶಗಳನ್ನೊಳಗೊಂಡು ನಗರ ಪ್ರದೇಶಗಳಲ್ಲಿ ಸಂಪೂರ್ಣ ಬಡತನ ಹೊಗಲಾಡಿಸುವ ಉದ್ದೇಶವಿಟ್ಟುಕೊಂಡು ನಾಲ್ಕು ಉಪಘಟಕಗಳನ್ನೊಳಗೊಂಡು ಸ್ವರ್ಣ ಜಯಂತಿ ಸ್ವ-ರೋಜಗಾರ ಯೋಜನೆಯನ್ನು 1997 ಡಿಸೆಂಬರ್ 01 ರಂದು ಜಾರಿಗೆ ತರಲಾಯಿತು. ಈ ಯೋಜನೆಯಡಿ ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲ ಸೌಲಭ್ಯ, ನಿರುದ್ಯೋಗ ಯುವಕ-ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು, ಮಹಿಳಾ ಸಬಲೀಕರಣಕ್ಕಾಗಿ ಮಹಿಳಾ ಸ್ವ-ಸಹಾಯ ಸಂಘಗಳ ರಚನೆ ಹಾಗೂ ಅಕುಶಲ ಕಾರ್ಮಿಕರಿಗೆ ಉದ್ಯೋಗ ಭರವಸೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರ ಮುಖಾಂತರ ಕಡಿಮೆ ಅವಧಿಯಲ್ಲಿ ನಗರ ಬಡ ಜನತೆಯ ಮನಮುಟ್ಟುವಂತಹ ಕಾರ್ಯಕ್ರಮ ಎನಿಸಿಕೊಂಡಿತು. ಮುಂದುವರೆದು ಸದರಿ ಸ್ವರ್ಣ ಜಯಂತಿ ಸ್ವ-ರೋಜಗಾರ ಯೋಜನೆಗೆ "ದೀನ ದಯಾಳ್ ಅಂತ್ಯೋದಯ ಅಭಿಯಾನ (ಡೇ-ನಲ್ಮ್) ಯೋಜನೆ"ಯೆಂದು 2014-15ನೇ ಸಾಲಿನಲ್ಲಿ ಮರು ನಾಮಕರಣ ಮಾಡಿ ಬೀದಿ ವ್ಯಾಪಾರಿಗಳಿಗೆ ಹಾಗೂ ನಗರ ವಸತಿ ರಹಿತರಿಗೆ ಬೆಂಬಲ ಎಂಬ ಎರಡು ಉಪಘಟಕಗಳನ್ನು ಸೇರಿಸಿ, ನಗರದ ಬಡ ಜನತೆಗೆ ಉಪಯೋಗಕಾರಿ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಮಹತ್ವದ ಹೆಜ್ಜೆಯಿಡುತ್ತಿದ್ದು, ನಗರ ಪ್ರದೇಶದಲ್ಲಿರುವ ಅನೇಕ ಬಡ ಜನರು ಹಲವು ರೀತಿಯಲ್ಲಿ ಸೌಲಭ್ಯಗಳನ್ನು ಪಡೆದು ಸಬಲತೆಯೆಡೆಗೆ ಸಾಗುತ್ತಿರುವುದು ಅತ್ಯಂತ ಹರ್ಷದಾಯಕ ಸಂಗತಿಯೆನಿಸುತ್ತದೆ.

## ನಗರ ವಸತಿ ರಹಿತರ ಆಶ್ರಯ ಕೇಂದ್ರಗಳ ಉದ್ದೇಶಗಳು:

ದೀನದಯಾಳ್ ಅಂತ್ಯೋದಯ ಯೋಜನೆಯಡಿ ನಗರ ವಸತಿ ರಹಿತರಿಗೆ ವಸತಿ ಸೌಲಭ್ಯ ಕಲ್ಪಿಸಿಕೊಡುವ ಈ ಉಪಘಟಕವು ಅತ್ಯಂತ ಪ್ರಮುಖವಾದ ಉಪಘಟಕವಾಗಿದ್ದು, ರಾಜ್ಯದ ಬಿಬಿಎಂಪಿಯಿಂದ ಹಿಡಿದು ನಗರಸಭೆ ವ್ಯಾಪ್ತಿಗಳಲ್ಲಿ ಸುಮಾರು 112 ರಷ್ಟು ನಗರ ನಿರಾಶ್ರಿತರ ಆಶ್ರಯ ಕೇಂದ್ರಗಳನ್ನು ಪ್ರಾರಂಭಿಸಲಾಗಿರುತ್ತದೆ. ಕೌಟುಂಬಿಕ ಕಲಹಗಳಿಂದ ಬೇಸತ್ತು ಮನೆಯನ್ನು ತೊರೆದು ಗೊತ್ತು ಗುರಿಯಿಲ್ಲದೆ ಬಂದ ಪುರುಷ ಮಹಿಳೆಯರು, ಬಸ್ ನಿಲ್ದಾಣ, ರೇಲ್ವೆ ನಿಲ್ದಾಣ, ಮಾರುಕಟ್ಟೆ ಪ್ರದೇಶಗಳು, ದೇವಸ್ಥಾನ & ಮಸೀದಿ ಹಾಗೂ ಕೃಷಿ ಮಾರಾಟ ಕೇಂದ್ರಗಳಲ್ಲಿ ವಾಸಕ್ಕೆ ಯೋಗ್ಯವಲ್ಲದಂತಹ ಸ್ಥಿತಿಯಲ್ಲಿ ವಾಸಿಸುತ್ತಿದ್ದವರಿಗೆ ತಾತ್ಕಾಲಿಕವಾಗಿ ವಾಸಿಸಲು ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸಿಕೊಡುವುದರ ಮುಖ್ಯ ಉದ್ದೇಶದೊಂದಿಗೆ ಸದರಿ ಯೋಜನೆಯನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಅನುಷ್ಠಾನಗೊಳಿಸಲು ಪ್ರಾರಂಭಿಸಲಾಯಿತು.

- ನಗರ ವಸತಿ ಆಶ್ರಯ ಕೇಂದ್ರಗಳಲ್ಲಿ ವಾಸಿಸುವ ನಿರಾಶ್ರಿತರಿಗೆ ದಿನ ನಿತ್ಯದ ಸೌಲಭ್ಯಗಳಾದ ಕುಡಿಯುವ ನೀರು, ಆಹಾರ ಹಾಗೂ ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದು.
- ವಸತಿ ರಹಿತರಿಗೆ ಸಮಾಲೋಚನೆ ಕೈಗೊಂಡು ಪುನರ್‌ವಸತಿ ಸೌಲಭ್ಯ ಕಲ್ಪಿಸಿಕೊಡುವುದು.
- ವಸತಿ ರಹಿತರಿಗೆ ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯ ಒದಗಿಸಿಕೊಡುವುದು ಹಾಗೂ ಆಸಕ್ತಿಯುಳ್ಳ ವಸತಿ ರಹಿತರಿಗೆ ವಿವಿಧ ವಿಷಯಗಳಲ್ಲಿ ಕೌಶಲ್ಯ ತರಬೇತಿಯನ್ನು ನೀಡಿ ಅವರಿಗೆ ಸ್ವಯಂ ಉದ್ಯೋಗ ಅಥವಾ ಕೂಲಿ ಆಧಾರಿತ ಉದ್ಯೋಗವಕಾಶ ಕಲ್ಪಿಸಿಕೊಡುವುದು.
- ಪ್ರತಿ 15 ದಿವಸಗಳಿಗೊಮ್ಮೆ ರ್‍ಯಾಪಿಡ್ ಸರ್ವೆ ಸಮೀಕ್ಷೆ ಮೂಲಕ ವಸತಿ ರಹಿತರನ್ನು ಗುರುತಿಸುವುದು.




## ಯಾದಗಿರಿ ನಗರದಲ್ಲಿ ನಿರಾಶ್ರಿತರ ಆಶ್ರಯ ಕೇಂದ್ರ:

ಜಿಲ್ಲಾ ಕೇಂದ್ರವಾದ ಯಾದಗಿರಿಯಲ್ಲಿ ನಗರಸಭೆ ವತಿಯಿಂದ 2019-20 ರಲ್ಲಿ ನಗರ ವಸತಿ ರಹಿತರ ಆಶ್ರಯ ಕೇಂದ್ರವನ್ನು ಪ್ರಾರಂಭಿಸಲಾಗಿದ್ದು, ಭಾರತಾಂಬೆ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮುಖಾಂತರ ಬಾಡಿಗೆ ಕಟ್ಟಡದಲ್ಲಿ ಅನುಷ್ಠಾನಗೊಳಿಸಲಾಯಿತು. ಪ್ರಸ್ತುತ ಯಾದಗಿರಿ ನಗರಸಭೆ ವ್ಯಾಪ್ತಿಯಲ್ಲಿ ರೂ. 42.00 ಲಕ್ಷಗಳ ಅನುದಾನದಲ್ಲಿ ನಿರ್ಮಿಸಲಾದ ಶಾಸ್ವತ ಕಟ್ಟಡದಲ್ಲಿ ನಗರದ ರೇಲ್ವೆ ನಿಲ್ದಾಣದ ಎದುರುಗಡೆ ಅನುಷ್ಠಾನಗೊಳಿಸಲಾಗುತ್ತಿದೆ. ನಗರದ ರೇಲ್ವೆ ನಿಲ್ದಾಣ, ಬಸ್ ನಿಲ್ದಾಣ, ಮಾರುಕಟ್ಟೆ ಪ್ರದೇಶಗಳು, ದೇವಸ್ಥಾನ ಕೇಂದ್ರಗಳು ಹಾಗೂ ಕೃಷಿ ಮಾರಾಟ ಕೇಂದ್ರಗಳಲ್ಲಿ ವಾಸಕ್ಕೆ ಯೋಗ್ಯವಲ್ಲದ ಸ್ಥಳಗಳಲ್ಲಿ ಯಾವುದೇ ಸೌಲಭ್ಯಗಳಿಲ್ಲದೇ ವಾಸಿಸುತ್ತಿರುವವರನ್ನು ರ್‍ಯಾಪಿಡ್ ಸಮೀಕ್ಷೆ ಕೈಗೊಳ್ಳುವುದರ ಮುಖಾಂತರ ಗುರುತಿಸಿ ಆಶ್ರಯ ಕೇಂದ್ರಕ್ಕೆ ಕರೆತರಲಾಗಿ, ದಿನಾಲು ಸರಾಸರಿಯಾಗಿ 14 ರಿಂದ 17 ಜನ ನಿರಾಶ್ರಿತರು ಕೇಂದ್ರದಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ಆಶ್ರಯ ಕೇಂದ್ರದಲ್ಲಿ ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾದ ವಾಸದ ಸೌಲಭ್ಯವಿರುತ್ತದೆ.

ಯಾದಗಿರಿ ನಗರಸಭೆ ವ್ಯಾಪ್ತಿಯಲ್ಲಿ ಅನುಷ್ಠಾನ ಗೊಳ್ಳುತ್ತಿರುವ ನಿರಾಶ್ರಿತರ ಕೇಂದ್ರಕ್ಕೆ ಕಲಬುರಗಿ, ರಾಯಚೂರು, ವಿಜಯಪುರ, ಹೈದರಾಬಾದ್, ಸೋಲಾಪುರ ಹಾಗೂ ಯಾದಗಿರಿ ಜಿಲ್ಲೆಯ ವಿವಿಧ ಭಾಗಗಳಿಂದ ನಿರಾಶ್ರಿತರು ಬರುತ್ತಿದ್ದು, ಬಹುತೇಕ ನಿರಾಶ್ರಿತರು 35 ರಿಂದ 65 ವಯಸ್ಸಿನವರಾಗಿದ್ದಾರೆ, ಹಾಗೂ ಸುಮಾರು ಶೇ. 99 ರಷ್ಟು ಪುರುಷ ನಿರಾಶ್ರಿತರಾಗಿದ್ದಾರೆ.

## ನಿರಾಶ್ರಿತರ ನೊಂದಣಿ ಪ್ರಕ್ರಿಯೆ:

ನಗರದ ರೇಲ್ವೆ ನಿಲ್ದಾಣದ ಎದುರುಗಡೆ ಇರುವ ನಗರ ನಿರಾಶ್ರೀತರ ಆಶ್ರಯ ಕೇಂದ್ರಕ್ಕೆ ನಿರಾಶ್ರಿತರು

ವಿಳಾಸ ತಿಳಿದುಕೊಂಡು ಬರುವವರ ಸಂಖ್ಯೆ ಬಹಳಷ್ಟಿದೆ ಹಾಗೂ ರ್‍ಯಾಪಿಡ್ ಸಮೀಕ್ಷೆ ಮುಖಾಂತರ ಗುರುತಿಸಿ ಕರೆದುಕೊಂಡು ಕೇಂದ್ರಕ್ಕೆ ಬರುವವರಿಗೆ ಪ್ರಥಮವಾಗಿ ಸಮಾಲೋಚನೆ ಮಾಡಲಾಗುವುದು, ನಿರಾಶ್ರಿತರ ಹಿನ್ನಲೆಯನ್ನು ತಿಳಿದುಕೊಂಡು ಅವರ ಸಂಬಂಧಿಕರನ್ನು ಸಂಪರ್ಕಿಸಲಾಗುವುದು. ಕುಟುಂಬಸ್ಥರ ಜೊತೆಗೆ ಮರಳಿ ಹೋಗಲು ಅವರಿಗೆ ಪರಿವರ್ತನೆ ಮಾಡಲಾಗುವುದು. ನಂತರ ಅವರ ವಿವರಗಳನ್ನು ಒಳಗೊಂಡಂತೆ ನಿಗಧಿತ ನಮೂನೆಯಲ್ಲಿ ನೋಂದಣಿ ಮಾಡಿಕೊಳ್ಳಲಾಗುವುದು ಹಾಗೂ ರಿಜಿಸ್ಟರಿನಲ್ಲಿ ಸಹ ಅವರ ವಿವರಗಳನ್ನು ನಮೂದಿಸಲಾಗುವುದು. ಸುಮಾರು ಶೇ.95ರಷ್ಟು ನಿರಾಶ್ರಿತರು 03 ಅಥವಾ 04 ದಿವಸಗಳವರೆಗೆ ಕೇಂದ್ರದಲ್ಲಿ ಇದ್ದು, ನಂತರ ಕೇಂದ್ರದಲ್ಲಿ ಇರುವ ಸಿಬ್ಬಂದಿಗಳಿಗೆ ಯಾವುದೇ ಮಾಹಿತಿ ನೀಡದೇ ಹೋಗುತ್ತಾರೆ.

**ನಿರಾಶ್ರಿತರ ಕೇಂದ್ರದಲ್ಲಿರುವ ಸೌಲಭ್ಯಗಳು:**

ನಿರಾಶ್ರಿತರು ದಿನಬೆಳಗಾದರೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾ, ನಿಕೃಷ್ಟ ಜೀವನ ಸಾಗಿಸುತ್ತಿದ್ದು ಮಾನಸಿಕವಾಗಿ ಕುಗ್ಗುತ್ತಾ, ಸಮಾಜದಲ್ಲಿ ತಮ್ಮದೇ ಆದ ಜಗತ್ತನ್ನು ಸೃಷ್ಟಿಕೊಂಡಿದ್ದು, ಯಾವುದೇ ಆಶ್ರಯವಿಲ್ಲದೇ ನಗರಗಳ ವಿವಿಧ ಪ್ರದೇಶಗಳಲ್ಲಿ ವಾಸಿಸುತ್ತಿರುವವರಿಗಾಗಿಯೇ ಸ್ಥಾಪಿತವಾದ ನಿರಾಶ್ರಿತರ ಕೇಂದ್ರದಲ್ಲಿ ಈ ಕೆಳಗಿನಂತೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

- ದಿನ ನಿತ್ಯದ ಬದುಕಿಗಾಗಿ ಅವಶ್ಯಕತೆ ಇರುವ ಸೌಲಭ್ಯಗಳನ್ನು ಒದಗಿಸುವುದು (ಟೂಥ್ ಪೇಸ್ಟ್, ಬ್ರಸ್, ಸಾಬೂನು, ಕೊಬ್ಬರಿ ಎಣ್ಣೆ, ಇತ್ಯಾದಿ).
- ಕುಡಿಯುವ ನೀರಿನ ಸೌಲಭ್ಯ (ಫಿಲ್ಟರ್ ವಾಟರ್) ಒದಗಿಸಲಾಗುವುದು.
- ಬೆಳಗಿನ ಉಪಹಾರದೊಂದಿಗೆ ಆಹಾರದ ಸೌಲಭ್ಯ ನೀಡಲಾಗುವುದು.
- ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕ ವಾಸಿಸುವ ಕೋಣೆಗಳ ಸೌಲಭ್ಯ.
- ಪ್ರತಿ 15 ದಿವಸಗಳಿಗೊಮ್ಮೆ ಆರೋಗ್ಯ ತಪಾಸಣೆ ಜೊತೆಗೆ ದಿನಾಲು ಯೋಗಭ್ಯಾಸ ಮಾಡಿಸಲಾಗುವುದು.
- ಸಮಾಲೋಚನೆಯ ನಂತರ ಕುಟುಂಬಸ್ಥರನ್ನು ಸಂಪರ್ಕಿಸಿ, ಕುಟುಂಬದ ಸದಸ್ಯರನ್ನು ಕೇಂದ್ರಕ್ಕೆ ಕರೆಯಿಸಿ ಅವರಿಗೂ ಸಹ ಸಮಾಲೋಚನೆ ಮಾಡಿ ನಿರಾಶ್ರಿತರನ್ನು ಒಪ್ಪಿಸುವ ವ್ಯವಸ್ಥೆ ಇರುತ್ತದೆ.
- ನಿರಾಶ್ರಿತರು ಯಾವುದಾದರೂ ಕೂಲಿ ಆಧಾರಿತ ಉದ್ಯೋಗ ಮಾಡಲು ಇಚ್ಚಿಸಿದಲ್ಲಿ ಅಂತಹವರಿಗೆ ಉದ್ಯೋಗವಕಾಶ ಕಲ್ಪಿಸಲಾಗುವುದು.
- ನಿರಾಶ್ರಿತರು ಸ್ವಯಂ ಉದ್ಯೋಗ ಕೈಗೊಳ್ಳಲು ಆಸಕ್ತಿ ವ್ಯಕ್ತಪಡಿಸಿದಲ್ಲಿ ಅಂತಹವರಿಗೆ ಡೇ-ನಲ್ಮ್ ಯೋಜನೆಯ ಸ್ವಯಂ ಉದ್ಯೋಗ ಕಾರ್ಯಕ್ರಮದಡಿ ಬ್ಯಾಂಕುಗಳಿಂದ ಸಾಲ ಸೌಲಭ್ಯ ಕಲ್ಪಿಸಿಕೊಡಲಾಗುವುದು.
- ಸಾಮಾಜಿಕ ಭದ್ರತಾ ಸೌಲಭ್ಯ ಹೊಂದಿರುವ ಬಗ್ಗೆ ಸಮಾಲೋಚನೆಯಿಂದ ತಿಳಿದುಕೊಂಡು, ಅಗತ್ಯ ದಾಖಲಾತಿಗಳಿದ್ದಲ್ಲಿ ಅಂತಹವರಿಗೆ ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯ ಒದಗಿಸಲಾಗುವುದು.

**ಆಸರೆಯಾದ ನಿರಾಶ್ರಿತರ ಕೇಂದ್ರ:**

ಪ್ರಸ್ತುತ ನಗರ ನಿರಾಶ್ರಿತರ ಕೇಂದ್ರದಲ್ಲಿ ವಾಸಿಸುತ್ತಿರುವವರ ಪೈಕಿ ಸುಮಾರು 8 ಜನರು ತಮ್ಮ ಹಾಗೂ ಕುಟುಂಬದವರ ಜೀವನ ನಿರ್ವಹಣೆಗಾಗಿ ನಗರದ ವಿವಿಧ ಸ್ಥಳಗಳಲ್ಲಿ ಕೂಲಿ ಕೆಲಸ ಮಾಡುತ್ತಿದ್ದು ವಿವರ ಈ ಕೆಳಗಿನಂತಿರುತ್ತದೆ.

| ಕ್ರ. ಸಂ. | ಕೆಲಸದ ವಿವರ | ನಿರಾಶ್ರಿತರ ಸಂಖ್ಯೆ | ಪ್ರತಿ ದಿನಕ್ಕೆ ಪಡೆಯುತ್ತಿರುವ ವೇತನ (ರೂ.ಗಳಲ್ಲಿ) |
|---|---|---|---|
| 1 | ಕಟ್ಟಡ ಕಾರ್ಮಿಕರು | 3 | 400.00 |
| 2 | ಅಡುಗೆ ಭಟ್ಟ | 1 | 500.00 |
| 3 | ಹೋಟೆಲ್ ಸಪ್ಲೈಯರ್ | 3 | 300.00 |
| 4 | ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕೂಲಿ ಕಾರ್ಮಿಕ | 1 | 400.00 |



ಪ್ರಾಮಾಣಿಕವಾಗಿ ಮಾಡುವ ಯಾವುದೇ ಕೆಲಸವು ದೇಶಭಕ್ತಿಯ ಕಾರ್ಯವಾಗಿದೆ : ಡಾ.ವಿಠೋಬ ಯಾದವ್

ಆರೋಗ್ಯ ತಪಾಸಣೆ ಶಿಬಿರ

ನಗರದ ನಿರಾಶ್ರಿತ ಕೇಂದ್ರದಲ್ಲಿರುವವರಿಗೆ ವೈದ್ಯಕೀಯ ತಪಾಸಣೆ ಪ್ರಾಥಮಿಕ : ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಭುದೊರೆ

ನಿರಾಶ್ರಿತರ ಕೇಂದ್ರದಲ್ಲಿ ಜನರ ಆರೋಗ್ಯ ತಪಾಸಣೆ : ಅಧಿಕಾರಿ ದೊರೆ ಹೇಳಿಕೆ

ನಿರಾಶ್ರಿತರ ಯೋಗಕ್ಷೇಮ ಕಾಪಾಡಿ

ರಾತ್ರಿ ಸಮಯದಲ್ಲಿ ಯಾದಗಿರಿ ನಗರದ ರೇಲ್ವೆ ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ ಮಲಗಿಕೊಂಡಾಗ ಕೇಂದ್ರದ ಸಿಬ್ಬಂದಿಗಳು ರ್‍ಯಾಪಿಡ್ ಸಮೀಕ್ಷೆ ಮುಖಾಂತರ ಗುರುತಿಸಿ ಕೇಂದ್ರಕ್ಕೆ ಕರೆ ತಂದು, ಅವರನ್ನು ಸಮಾಲೋಚನೆಗೊಳಪಡಿಸಿದಾಗ ತಮ್ಮ ಕುಟುಂಬ ನಿರ್ವಹಣೆಗಾಗಿ ಉದ್ಯೋಗ ಅರಸಿ ತಮ್ಮ ಊರುಗಳನ್ನು ಬಿಟ್ಟು ಬಂದಿರುವುದು ತಿಳಿದು ಬಂದಿರುತ್ತದೆ. ಇವರುಗಳಿಗೆ ಆಸಕ್ತಿ ಇರುವ ಉದ್ಯೋಗಗಳಲ್ಲಿ ಕೆಲಸ ಮಾಡಲು ಕೇಂದ್ರದ ಸಿಬ್ಬಂದಿಯವರು ಪ್ರಮುಖವಾಗಿರುವುದು ಕಂಡು ಬಂದಿದ್ದು, ದಿನಪೂರ್ತಿ ಕೆಲಸ ಮಾಡಿ ರಾತ್ರಿ ಕೇಂದದಲ್ಲಿ ಮಲಗುತ್ತಾರೆ. ಇಂತಹ ಕೇಂದ್ರಗಳು ನಮ್ಮಂತಹ ನಿರಾಶ್ರಿತರಿಗೆ ತಾತ್ಕಾಲಿಕವಾಗಿ ಆಸರೆಯಾಗಿವೆ ಎಂಬುದು ನಿರಾಶ್ರಿತರ ಅಭಿಪ್ರಾಯವಾಗಿದೆ.

**ಕೊನೆಯ ಮಾತು:**

ಯಶಸ್ವಿ ಕುಟುಂಬ ನಿರ್ವಹಣೆಯ ನಂತರ ವೃದ್ಧಾಪ್ಯ ಸಮೀಪಿಸುತ್ತಿರುವಾಗ ಕುಟುಂಬದವರಿಂದ ನಿರ್ಲಕ್ಷಕ್ಕೆ ಒಳಗಾಗಿ, ಬದುಕಿ ಬಾಳಿದ ಮನೆಯಿಂದ ತಿರಸ್ಕೃತಗೊಂಡು ಗೊತ್ತು ಗುರಿಯಿಲ್ಲದೇ ದಿಕ್ಕು ಕಂಡ ಕಡೆ ಬಂದು, ನಿರ್ಗತಿಕರಾಗಿ ವಾಸಿಸುತ್ತಾ, ಜೀವನ ನಿರ್ವಹಣೆಗಾಗಿ ಬಿಕ್ಷೆ ಬೇಡುತ್ತಿರುವವರು. ಇನ್ನೊಂದೆಡೆ ಕುಟುಂಬ ನಿರ್ವಹಣೆಗಾಗಿ ಉದ್ಯೋಗ ಅರಸಿ ನಗರಗಳಿಗೆ ಬರುವವರಿಗೆ ತಾತ್ಕಾಲಿವಾಗಿ ಬದುಕಲು ಆಸರೆಯಾಗುವ ರೇಲ್ವೆ ನಿಲ್ದಾಣ, ಬಸ್ ನಿಲ್ದಾಣ, ಮಠ, ಮಂದಿರ, ದೇವಸ್ಥಾನಗಳು, ರಸ್ತೆ ಬದಿಯ ಜಾಗಗಳನ್ನೇ ಅವಲಂಬಿತರಾಗಿ ಜೀವನ ಸಾಗಿಸುತ್ತಿರುವವರ ಬಾಳಿನಲ್ಲಿ ಬೆಳಕು ಹರಿಸುವ ಉದ್ದೇಶವಿಟ್ಟುಕೊಂಡು ಸ್ಥಾಪಿತಗೊಂಡಿರುವ ನಗರ ನಿರಾಶ್ರಿತರ ಕೇಂದ್ರಗಳು ಬಹಳಷ್ಟು ಜನರಿಗೆ ವಾಸಿಸಲು ಆಸರೆಯಾಗಿವೆ. ಇಂತಹ ಕೇಂದ್ರಗಳು ನಿರಾಶ್ರಿತರ ಬಾಳನ್ನೇ ಬದಲಾವಣೆಗೊಳಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ ಎಂದು ಹಲವಾರು ನಿರಾಶ್ರಿತರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

**ದೀನದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (DAY-NULM)**

080-2559 9993

daynulm@gmail.com

ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ




*ಬೆಂಗಳೂರಿನಲ್ಲಿ  ನಡೆದ ಸ್ಕಿಲ್ ಕನೆಕ್ಟ್ ಇಂಡಸ್ಟ್ರಿ ಕಾನ್‌ಕ್ಲೇವ್‌ನಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ಮಾನ್ಯ ಸಚಿವರು*

# ಜಾಗೃತಿ, ಕೌಶಲ್ಯಾಭಿವೃದ್ಧಿ, ಯುವಸಬಲೀಕರಣ ಕಾರ್ಯಕ್ರಮಗಳ ಕುರಿತು ಕೆಎಸ್‌ಡಿಸಿ ತ್ರೈಮಾಸಿಕ ವರದಿ

## ■ 5 ಜೂನ್, 2023: ಜಿಲ್ಲೆಗಳಲ್ಲಿ ಮಿಷನ್ ಲೈಫ್ ಪರಿಸರ ಜಾಗೃತಿ

- ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ರಾಷ್ಟ್ರೀಯ ಜನಜಾಗೃತಿ ಅಭಿಯಾನ ಮಿಷನ್ ಲೈಫ್ (ಪರಿಸರಕ್ಕಾಗಿ ಜೀವನಶೈಲಿ) ಕಾರ್ಯಕ್ರಮಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಕೌಶಲ್ಯ ಅಭಿವೃದ್ಧಿ ಕಛೇರಿಗಳ ಮೂಲಕ ಆಯೋಜಿಸಲಾಯಿತು. ಸಸಿ ನೆಡುವ ಮತ್ತು ಸ್ವಚ್ಛತಾ ಕಾರ್ಯಕ್ರಮ, ಸೈಕ್ಲಾಥಾನ್, ರಸಪ್ರಶ್ನೆ ಸ್ಪರ್ಧೆಗಳು, ಪೋಸ್ಟರ್ ತಯಾರಿಕೆ ಮತ್ತು ಕಲಾ ಸ್ಪರ್ಧೆಗಳು, ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿ ಕಾರ್ಯಾಗಾರಗಳನ್ನು ರಾಜ್ಯಾದ್ಯಂತ ನಡೆಸಲಾಯಿತು. ಈ ಮೂಲಕ ಜೀವನಶೈಲಿಗಳಲ್ಲಿ ಬದಲಾವಣೆಯನ್ನು ಪ್ರೇರೇಪಿಸಿ ಸಂಪನ್ಮೂಲಗಳ ಜಾಗರೂಕ ಬಳಕೆಯ ಕುರಿತು ಜಾಗೃತಿ ಮೂಡಿಸಲಾಯಿತು. ಹೆಚ್ಚಿನ ಮಾಹಿತಿಗೆ https://tinyurl.com/ksdc-missionlife ಗೆ ಭೇಟಿ ನೀಡಿ.

## 9 ಜೂನ್, 2023: ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ಇಲಾಖಾ ಪರಿಶೀಲನಾ ಸಭೆ

- ಪರಿಶೀಲನಾ ಸಭೆಯ ಅಧ್ಯಕ್ಷತೆಯನ್ನು ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖಾ ಸಚಿವರಾದ ಡಾ.ಶರಣಪ್ರಕಾಶ ಆರ್. ಪಾಟೀಲ್ ಮತ್ತು ಸಭೆಯ ನೇತೃತ್ವವನ್ನು ಡಾ. ಎಸ್. ಸೆಲ್ವಕುಮಾರ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅವರು ವಹಿಸಿದ್ದರು. ಇಲಾಖೆಯ ವಿವಿಧ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಚರ್ಚೆ ನಡೆಸಿ, ಯೋಜನೆಗಳನ್ನು ಪರಿಶೀಲಿಸಿ ಮುಂದಿನ ಗುರಿಗಳನ್ನು ನಿಗದಿಪಡಿಸಿದರು.

## 1 ರಿಂದ 15 ಜೂನ್, 2023: ಜಿಲ್ಲೆಗಳಲ್ಲಿ G20 ಜನಭಾಗಿದಾರಿ ಕಾರ್ಯಕ್ರಮಗಳು

- ಭಾರತದ ಜಿ–20 ಅಧ್ಯಕ್ಷತೆಯ ಸಾಲಿನಲ್ಲಿ ನಾಗರೀಕರ ಸಕ್ರಿಯ ಭಾಗವಹಿಸುವಿಕೆಯನ್ನು ಉತ್ತೇಜಿಸಲು, ಭಾರತ ಸರ್ಕಾರದ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ ನಿರ್ದೇಶನದಂತೆ 'ಜನಭಾಗಿದಾರಿ' ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಕರ್ನಾಟಕದಾದ್ಯಂತ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕಛೇರಿಗಳ ಮೂಲಕ ವೃತ್ತಿ ಮಾರ್ಗದರ್ಶನ, ಯೋಗ ಸ್ಪರ್ಧೆಗಳು, ಕೈಗಾರಿಕಾ ಭೇಟಿಗಳು, ಕ್ರೀಡಾ ಸ್ಪರ್ಧೆಗಳು, ವೆಬಿನಾರ್‌ಗಳು ಮತ್ತು ಕಾರ್ಯಾಗಾರಗಳನ್ನು ನಡೆಸಲಾಯಿತು.




**ಅಧ್ಯಕ್ಷರು, ವಿಶ್ವ ಬ್ಯಾಂಕ್ ಗ್ರೂಪ್, ಮತ್ತು ಕಾರ್ಯದರ್ಶಿ, ಎಂ.ಎಸ್.ಡಿ.ಇ., ಸಂಕಲ್ಪ್ ಫಲಾನುಭವಿಗಳೊಂದಿಗೆ ಮಾತನಾಡುತ್ತಿರುವುದು**

## 15 ಮತ್ತು 19 ಜೂನ್, 2023: ಸ್ಕಿಲ್ ಕನೆಕ್ಟ್ ಉದ್ಯೋಗ ಮೇಳ

- ಹೋಟೆಲ್ ಮತ್ತು ಆತಿಥ್ಯ ವಲಯದಲ್ಲಿ ಉದ್ಯೋಗಾವಕಾಶ ಕಲ್ಪಿಸಿ, ಉದ್ಯೋಗಾಕಾಂಕ್ಷಿಗಳ ನೇಮಕಾತಿಯನ್ನು ಬೆಂಬಲಿಸಲು, ಕೆ.ಎಸ್.ಡಿ.ಸಿ.ಯು ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್ ನೊಂದಿಗೆ ಕೈಜೋಡಿಸಿದೆ. ಈ ನಿಟ್ಟಿನಲ್ಲಿ ಜೂನ್ 15 ರಂದು ಬೆಂಗಳೂರಿನಲ್ಲಿ ಮತ್ತು ಜೂನ್ 19 ರಂದು ಬೆಳಗಾವಿಯಲ್ಲಿ ಉದ್ಯೋಗ ಮೇಳಗಳನ್ನು ಆಯೋಜಿಸಿದ್ದು, 62 ಉದ್ಯೋಗ ಆಫರ್‌ಗಳನ್ನು ನೀಡಲಾಗಿದ್ದು, 68 ಅಭ್ಯರ್ಥಿಗಳನ್ನು ಶಾರ್ಟ್ಲಿಸ್ಟ್ ಮಾಡಲಾಗಿದೆ.

## ಐ.ಎಂ.ಸಿ.ಕೆ. ವತಿಯಿಂದ ಹಂಗೇರಿ ದೇಶಕ್ಕೆ ಟ್ರೈಲರ್ ಟ್ರಕ್ ಚಾಲಕರ ನೇಮಕಾತಿ

- ಕೆಎಸ್‌ಡಿಸಿಯ ಇಂಟರ್‌ನ್ಯಾಶನಲ್ ಮೈಗ್ರೇಷನ್ ಸೆಂಟರ್ – ಕರ್ನಾಟಕ (ಐ.ಎಂ.ಸಿ.ಕೆ.) ಆಯೋಜಿಸಿದ್ದ ನೇಮಕಾತಿ ಅಭಿಯಾನದಲ್ಲಿ 87 ಅಭ್ಯರ್ಥಿಗಳನ್ನು ಸಂದರ್ಶಿಸಲಾಗಿದ್ದು, 41 ಅಭ್ಯರ್ಥಿಗಳನ್ನು ಹಂಗೇರಿ ದೇಶದಲ್ಲಿ ಉದ್ಯೋಗಕ್ಕೆ ಆಯ್ಕೆ ಮಾಡಲಾಗಿದೆ. ಯಲಹಂಕದ ತರಬೇತಿ ಟ್ರ್ಯಾಕ್‌ನಲ್ಲಿ 18 ಚಕ್ರಗಳ ಟ್ರೈಲರ್ ಟ್ರಕ್ ಓಡಿಸಲು ಪ್ರಾಯೋಗಿಕ ಪರೀಕ್ಷೆಯನ್ನು ಮತ್ತು ಇಂಗ್ಲಿಷ್ ಪ್ರಾವೀಣ್ಯತೆ ಪರೀಕ್ಷೆ ಆಯೋಜಿಸಲಾಗಿತ್ತು.

## 23 ಜೂನ್, 2023: ಬೆಂಗಳೂರಿನಲ್ಲಿ ಸ್ಕಿಲ್ ಕನೆಕ್ಟ್ ಇಂಡಸ್ಟ್ರಿ ಕಾನ್ಕ್ಲೇವ್

- ಇಲಾಖಾ ಸಚಿವರಾದ ಡಾ.ಶರಣಪ್ರಕಾಶ ಆರ್. ಪಾಟೀಲ್ ಅವರು ಮೊದಲ ಸ್ಕಿಲ್ ಕನೆಕ್ಟ್ ಇಂಡಸ್ಟ್ರಿ ಕಾನ್ಕ್ಲೇವ್ ಅನ್ನು ಬೆಂಗಳೂರಿನಲ್ಲಿ ಉದ್ಘಾಟಿಸಿ, ಕರ್ನಾಟಕ ಸ್ಕಿಲ್ ಕನೆಕ್ಟ್ ಪೋರ್ಟಲ್‌ನಂತಹ ಕಾರ್ಯಕ್ರಮಗಳ ಮೂಲಕ ಕೌಶಲ್ಯ ಅಂತರವನ್ನು ಕಡಿಮೆ ಮಾಡಲು ಮತ್ತು ಉದ್ಯೋಗಾವಕಾಶವನ್ನು ಸೃಷ್ಟಿಸಲು ಸರ್ಕಾರ ಕೈಗೊಂಡ ಪ್ರಯತ್ನಗಳ ಕುರಿತು








***ಜಿಲ್ಲೆಗಳಲ್ಲಿ G20 ಜನಭಾಗಿದಾರಿ ಕಾರ್ಯಕ್ರಮಗಳು***

100+ ಕೈಗಾರಿಕಾ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಿದರು.

- ಕೌಶಲ್ಯ ಮತ್ತು ಕೌಶಲ್ಯ-ಆಧಾರಿತ ನೇಮಕಾತಿ, ಉದ್ಯೋಗಿ-ವೈವಿಧ್ಯತೆ, ಮತ್ತು ಯಾಂತ್ರೀಕೃತಗೊಂಡ ಯುಗದಲ್ಲಿ ಕೌಶಲ್ಯ ಉನ್ನತೀಕರಣದ ಅಗತ್ಯತೆಗಳಲ್ಲಿ ಉದ್ಯಮ-ಅಕಾಡೆಮಿಯಾ-ಸರ್ಕಾರದ ಸಹಯೋಗಗಳ ಕುರಿತು ಕೈಗಾರಿಕಾ ಪರಿಣಿತರೊಂದಿಗೆ ಸಂವಾದವನ್ನು ನಡೆಸಲಾಯಿತು.

### ■ 15 ಜುಲೈ, 2023: UNDP ಯೊಂದಿಗೆ ವಿಶ್ವ ಯುವ ಕೌಶಲ್ಯ ದಿನ

- ಕೆಎಸ್‌ಡಿಸಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶ್ವಿನ್ ಗೌಡ ಅವರು 'ಕೋಡ್ ಉನ್ನತಿ ಇನಿಶಿಯೇಟಿವ್' ಅಡಿಯಲ್ಲಿ ಯೂತ್ ಇನ್ನೋವೇಶನ್ ಐಡಿಯೇಶನ್ ಚಾಲೆಂಜ್ 2023ರ ಹಂತ-II ಕ್ಕೆ ಚಾಲನೆಯನ್ನು ನೀಡಿದರು. ಇದು SAP Labs, UNDP ಮತ್ತು KSDC ಸಹಯೋಗದಲ್ಲಿ ಕರ್ನಾಟಕದ ಯುವಜನತೆಯಲ್ಲಿ ನಾವೀನ್ಯತೆ ಆಧಾರಿತ ಉದ್ಯಮಶೀಲತೆಯನ್ನು ಉತ್ತೇಜಿಸಲು ಮೂಡಿಬಂದ ಕಾರ್ಯಕ್ರಮವಾಗಿದೆ.

### ■ 15 ಜುಲೈ, 2023: ಜಿಲ್ಲೆಗಳಲ್ಲಿ ಪ್ರಥಮ ಚಿಕಿತ್ಸೆ ತರಬೇತಿ

ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕಛೇರಿಗಳ ವತಿಯಿಂದ ಇತರ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ವಿಶ್ವ ಯುವ ಕೌಶಲ್ಯ ದಿನದ ಅಂಗವಾಗಿ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ಮತ್ತು ಸಾರ್ವಜನಿಕರಿಗೆ ಪ್ರಥಮ ಚಿಕಿತ್ಸಾ ತರಬೇತಿಯನ್ನು ಆಯೋಜಿಸಲಾಯಿತು.

### ■ 19 ಜುಲೈ, 2023: ವರ್ಲ್ಡ್ ಬ್ಯಾಂಕ್ ಗ್ರೂಪ್ ಅಧ್ಯಕ್ಷರ ಸ್ಕಿಲ್ ಆನ್ ವೀಲ್ಸ್ ಫಲಾನುಭವಿಗಳೊಂದಿಗೆ ಸಂವಹನ

ವಿಶ್ವ ಬ್ಯಾಂಕ್ ಸಮೂಹದ ಅಧ್ಯಕ್ಷರಾದ ಶ್ರೀ ಅಜಯ್ ಬಂಗಾ ಮತ್ತು ಭಾರತ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ



*ಮಿಷನ್ ಲೈಫ್ ಕಲಾ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವ ಸಿ.ಎಂ.ಕೆ.ಕೆ.ವೈ. ವಿದ್ಯಾರ್ಥಿಗಳು*

ಸಚಿವಾಲಯದ ಕಾರ್ಯದರ್ಶಿ ಶ್ರೀ ಅತುಲ್ ಕುಮಾರ್ ತಿವಾರಿ ಅವರು ಭಾರತದಾದ್ಯಂತ ವಿವಿಧ SANKALP ಯೋಜನೆಗಳ ಫಲಾನುಭವಿಗಳೊಂದಿಗೆ ಆನ್‌ಲೈನ್ ಮೂಲಕ ಸಂವಾದ ನಡೆಸಿದರು. ಉಡುಪಿಯ ಕುಂದಾಪುರದ ಕೋಣಿ ಗ್ರಾಮದಿಂದ ಕೆಎಸ್‌ಡಿಸಿಯ ಸ್ಕಿಲ್ ಆನ್ ವೀಲ್ಸ್/ಕೌಶಲ್ಯ ರಥ ಕಾರ್ಯಕ್ರಮದ ಮೂಲಕ ಬ್ಯೂಟಿ ಥೆರಪಿಸ್ಟ್ ತರಬೇತಿ ಪಡೆದ ಅನು ಪ್ರಿಯಾರವರು ಮಾತನಾಡಿ, ಈ ತರಬೇತಿಯು ತನ್ನಂತಹ ಗ್ರಾಮೀಣ ಮಹಿಳೆಯರಿಗೆ ಉಪಯುಕ್ತವಾಗಿದೆ ಎಂದು ಹೇಳಿ, ತಮ್ಮ ಉದ್ಯಮಿಯಾಗಿ ಇನ್ನಿತರ ಮಹಿಳೆಯರಿಗೆ ತರಬೇತಿ ನೀಡುವ ಕನಸನ್ನು ಅವರೊಂದಿಗೆ ಹಂಚಿಕೊಂಡರು.

### ■ 19 ರಿಂದ 21 ಜುಲೈ, 2023: ರಾಯಚೂರಿನಲ್ಲಿ ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ಸಾಫ್ಟ್ ಸ್ಕಿಲ್ಸ್ ತರಬೇತಿ

ರಾಯಚೂರಿನ ಯುವಜನತೆಯ ಕೌಶಲ್ಯ ಅಭಿವೃದ್ಧಿಗಾಗಿ ಕೆ.ಎಸ್.ಡಿ.ಸಿ.ಯೊಂದಿಗೆ ಕೈಜೋಡಿಸಿರುವ ಇಂಡಿವಿಲೇಜ್ ಫೌಂಡೇಶನ್‌ನೊಂದಿಗೆ ಒಪ್ಪಂದದ ವಿನಿಮಯ ನಡೆದಿದೆ. ಈ ನಿಟ್ಟಿನಲ್ಲಿ ಇಂಡಿವಿಲೇಜ್ ಫೌಂಡೇಶನ್ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕಚೇರಿಯ ಸಹಯೋಗದೊಂದಿಗೆ ರಾಯಚೂರಿನ ಮೂರು ಸರ್ಕಾರಿ ಕಾಲೇಜುಗಳಲ್ಲಿ ಸಾಫ್ಟ್ ಸ್ಕಿಲ್ಸ್ ವಿಶೇಷ ಕಾರ್ಯಾಗಾರವನ್ನು ಆಯೋಜಿಸಿ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ, ವಿಪತ್ತು ನಿರ್ವಹಣೆ ಮತ್ತು ಉದ್ಯೋಗ ಕೌಶಲ್ಯಗಳ ಕುರಿತು ವಿದ್ಯಾರ್ಥಿಗಳಿಗೆ ಈ ಮೂಲಕ ಮಾಹಿತಿ ಒದಗಿಸಲಾಯಿತು.

